# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಸೆಪ್ಟೆಂಬರ್ 05, 2022

ಸಂಪುಟ : 49 ಸಂಚಿಕೆ : 113 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ರೈಲ್ವೆ ಬೋಗಿ ಉತ್ಪಾದನೆ ತೀವ್ರ ಕುಸಿತ

### ಉಕ್ರೇನ್ ಸಮರದಿಂದ ಎಲೆಕ್ಟ್ರಿಕ್ ಉಪಕರಣಗಳ ಉತ್ಪಾದನೆಗೂ ಹಿನ್ನಡೆ

ನವದೆಹಲಿ, ಸೆ. 4 – ರೈಲ್ವೆ ಬೋಗಿ, ಗಾಲಿ, ಇಂಜಿನ್ ಸೇರಿದಂತೆ ರೈಲಿನ ಪ್ರಮುಖ ಭಾಗಗಳ ಉತ್ಪಾದನೆಗೆ ಪ್ರಸಕ್ತ ಹಣಕಾಸು ವರ್ಷದ ಮೊದಲ ಚತುರ್ಥದಲ್ಲಿ ತೀವ್ರ ಹಿನ್ನಡೆಯಾಗಿದೆ. ಉಕ್ರೇನ್ ಸಮರದ ಕಾರಣದಿಂದಾಗಿ ಪೂರೈಕೆ ಜಾಲದ ಮೇಲೆ ಹೊರೆಯಾಗಿರುವುದೇ ಉತ್ಪನ್ನ ಕಡಿಮೆಯಾಗಲು ಕಾರಣ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ವರ್ಷದ ಮೊದಲ 4 ತಿಂಗಳಲ್ಲಿ ರೈಲುಗಳಿಗೆ ಅಗತ್ಯವಾದ ಘಟಕಗಳ ಉತ್ಪಾದನೆ ನಿರೀಕ್ಷೆಗಿಂತ ತೀರಾ ಕಡಿಮೆ ಇದೆ. ಈ ಬಗ್ಗೆ ರೈಲ್ವೆ ಮಂಡಳಿ ಅಧ್ಯಕ್ಷ ವಿ.ಕೆ. ತ್ರಿಪಾಠಿ ಅವರ ಅಧ್ಯಕ್ಷತೆಯಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಚರ್ಚಿಸಲಾಗಿದೆ.

ಇಎಂಯು/ಎಂಇಎಂಯು ರೈಲುಗಳಿಗೆ ಅಗತ್ಯವಾದ 53 ಬೋಗಿಗಳನ್ನು ಮಾತ್ರ ಉತ್ಪಾದಿಸಲು ಸಾಧ್ಯವಾಗಿದೆ. ನಾಲ್ಕು ತಿಂಗಳಲ್ಲಿ 730 ಬೋಗಿಗಳನ್ನು ಉತ್ಪಾದಿಸುವ ಗುರಿ ಇತ್ತು.

ಮೇನ್‌ಲೈನ್ ಎಲೆಕ್ಟ್ರಿಕ್ ಮಲ್ಟಿಪಲ್ ಯುನಿಟ್ (ಎಂ.ಇ.ಎಂ.ಯು.) ಹಾಗೂ ಇ.ಎಂ.ಯು. ರೈಲುಗಳನ್ನು ಅಲ್ಪ ಹಾಗೂ ಮಧ್ಯಮ ದೂರದ ಮಾರ್ಗಗಳಲ್ಲಿ ಬಳಸಲಾಗುತ್ತದೆ. ಇವು ನಗರ ಪ್ರದೇಶಗಳನ್ನು ಸಂಪರ್ಕಿಸುವ ಮತ್ತು ನಗರದೊಳಗೆ ಸಂಚರಿಸುವ ರೈಲುಗಳಲ್ಲಿ ಹೆಚ್ಚು ಉಪಯುಕ್ತವಾಗಿವೆ. ಇವುಗಳ ಜೊತೆಗೆ 60 ಕೆವಿಎ ಟ್ರಾನ್ಸ್‌ಫಾರ್ಮರ್‌ಗಳು ಹಾಗೂ ಸ್ವಿಚ್ ಕ್ಯಾಬಿನೆಟ್ ರೀತಿಯ ಎಲೆಕ್ಟ್ರಿಕ್ ಉಪಕರಣಗಳ ಪೂರೈಕೆಯೂ ಕಡಿಮೆ ಇದೆ.

ಈ ಸರಕುಗಳ ಉತ್ಪಾದನೆಗೆ ತಕ್ಷಣವೇ ಆದ್ಯತೆ ನೀಡಬೇಕು. ಉತ್ಪಾದನೆಯಲ್ಲಿ ಕೊರತೆಯಾಗದಂತೆ ನೋಡಿಕೊಳ್ಳಬೇಕು ಎಂದು ರೈಲ್ವೆಯ ಪ್ರಧಾನ ವ್ಯವಸ್ಥಾಪಕರಿಗೆ ತಿಳಿಸಲಾಗಿದೆ.

ಸೆಮಿಕಂಡಕ್ಟರ್‌ಗಳ ಪೂರೈಕೆ ಸಮಸ್ಯೆ ವಿಶ್ವದಾದ್ಯಂತ ಭುಗಿಲೆದ್ದಿದೆ. ಇದು ರೈಲ್ವೆ ಬಳಸುವ ಎಲೆಕ್ಟ್ರಿಕ್ ಉಪಕರಣಗಳ ಉತ್ಪಾದನೆ ಮೇಲೂ ಪರಿಣಾಮ ಬೀರುತ್ತಿದೆ.

ರೈಲ್ವೆಗೆ ಅಗತ್ಯವಾದ ದೊಡ್ಡ ಪ್ರಮಾಣದ ಎಲೆಕ್ಟ್ರಿಕ್ ಉಪಕರಣಗಳನ್ನು ಪೂರೈಸಲು ಗುತ್ತಿಗೆದಾರರಿಂದ ಸಾಧ್ಯವಾಗುತ್ತಿಲ್ಲ. ಆದರೆ, ಪ್ರಸಕ್ತ ಹಣಕಾಸು ವರ್ಷದ ಉಳಿದ ಅವಧಿಯಲ್ಲಿ ಪರಿಸ್ಥಿತಿ ಸುಧಾರಿಸಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ದೂರ ಪ್ರಯಾಣದ ರೈಲುಗಳಿಗೆ ಬಳಸುವ ಬೋಗಿಗಳ ಉತ್ಪಾದನೆಯಲ್ಲೂ ಕುಸಿತವಾಗಿದೆ. ಈ ಬೋಗಿಗಳ ಉತ್ಪಾದನೆಯಲ್ಲಿ ಶೇ.20.4ರಷ್ಟು ಕುಸಿತವಾಗಿದೆ.

## ಮೋದಿ - ಬಿಜೆಪಿ ಹರಡಿದ ದ್ವೇಷದಿಂದ ದೇಶ ದುರ್ಬಲ



ನವದೆಹಲಿ, ಸೆ. 4 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಬಿಜೆಪಿ ಭಯ ಹಾಗೂ ದ್ವೇಷ ಹರಡುತ್ತಾ ದೇಶವನ್ನು ದುರ್ಬಲಗೊಳಿಸು ತ್ತಿದ್ದಾರೆ. ಇದು ದೇಶದ ಶತ್ರು ಗಳಿಗೆ ಲಾಭ ತರು ತ್ತಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಇಲ್ಲಿನ ರಾಮಲೀಲಾ ಮೈದಾನದಲ್ಲಿ ಆಯೋಜಿಸಲಾಗಿದ್ದ 'ಮೆಹಂಗಾಯಿ ಪರ್ ಹಲ್ಲಾ ಬೋಲ್' (ಬೆಲೆ ಏರಿಕೆ ವಿರುದ್ಧ ದನಿ ಎತ್ತಿ) ಸಮಾವೇಶದಲ್ಲಿ ಮಾತನಾಡಿದ ರಾಹುಲ್, ಬೆಲೆ ಏರಿಕೆ, ದ್ವೇಷ ಹಾಗೂ ನಿರುದ್ಯೋಗಗಳಿಂದ ದೇಶ ದುರ್ಬಲವಾಗುತ್ತಿದೆ ಎಂದು ಹೇಳಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಬಿಜೆಪಿ ದೇಶ ದುರ್ಬಲ ಗೊಳಿಸಲು ಕೆಲಸ ಮಾಡುತ್ತಿದ್ದಾರೆ. ಆದರೆ, ಕಾಂಗ್ರೆಸ್ ದೇಶ ಒಗ್ಗೂಡಿಸುತ್ತಿದೆ. ನಾವು ದ್ವೇಷ ಹಾಗೂ ಭಯ ನಿವಾರಿಸು ತ್ತಿದ್ದೇವೆ ಎಂದು ರಾಹುಲ್ ಹೇಳಿದರು.

ಉದ್ಯೋಗ ನೀಡಲು ವಿಫಲವಾಗಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇವಲ ಇಬ್ಬರು ಉದ್ಯಮಿಗಳಿಗೆ ನೆರವಾಗುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿಪಕ್ಷಗಳು ಸಂಸತ್ತಿನಲ್ಲಿ ಮಾತನಾಡಲು ಸರ್ಕಾರ ಬಿಡುತ್ತಿಲ್ಲ. ಹೀಗಾಗಿ ನಾವು ಜನರ ಜೊತೆ ನೇರವಾಗಿ ಮಾತನಾಡುತ್ತಿದ್ದೇವೆ. ದೇಶದ ಕುರಿತ ಸತ್ಯವನ್ನು ಜನರಿಗೆ ತಿಳಿಸುತ್ತಿದ್ದೇವೆ ಎಂದು ರಾಹುಲ್ ಹೇಳಿದರು.

ಇದಕ್ಕಾಗಿಯೇ ನಾವು ಈ ವಾರದಲ್ಲಿ ಭಾರತ್ ಜೋಡೋ ಯಾತ್ರೆ ಆರಂಭಿಸಲಿದ್ದೇವೆ. ಈ ಯಾತ್ರೆಯಲ್ಲಿ ಜನರ ವಿಷಯಗಳ ಬಗ್ಗೆ ಜನರ ಜೊತೆ ನೇರವಾಗಿ ಮಾತನಾಡುತ್ತೇವೆ ಎಂದವರು ಹೇಳಿದರು.

ಕಾಂಗ್ರೆಸ್ ಪಕ್ಷದ 10 ವರ್ಷಗಳ ಆಡಳಿತದಲ್ಲಿ 27 ಕೋಟಿ ಜನರನ್ನು ಬಡತನದಿಂದ ಹೊರ (4ನೇ ಪುಟಕ್ಕೆ)

## ರಾಹುಲ್ ಅಧ್ಯಕ್ಷರಾಗಲಿ ಕಾರ್ಯಕರ್ತರ ಕೂಗು



ನವದೆಹಲಿ, ಸೆ. 4 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಮಾಡುವಂತೆ ಸಾವಿರಾರು ಬೆಂಬಲಿಗರು ರಾಮಲೀಲಾ ಮೈದಾನದಲ್ಲಿ ದನಿ ಎತ್ತಿದ್ದಾರೆ.

ಬೆಲೆ ಏರಿಕೆ ವಿರುದ್ಧ ರಾಮಲೀಲಾ ಮೈದಾನದಲ್ಲಿ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ಸಮಾವೇಶದಲ್ಲಿ ರಾಹುಲ್ ಗಾಂಧಿ ಅವರನ್ನು ಅಧ್ಯಕ್ಷರನ್ನಾಗಿ ಮಾಡುವಂತೆ ಒತ್ತಾಯಿಸುವ ಬ್ಯಾನರ್‌ಗಳನ್ನು ಅಳವಡಿಸಲಾಗಿತ್ತು.

2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತ ನಂತರ ರಾಹುಲ್ ಗಾಂಧಿ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ನಂತರ ಸೋನಿಯಾ ಗಾಂಧಿ ಅವರು ಪಕ್ಷದ ಹಂಗಾಮಿ ಅಧ್ಯಕ್ಷೆಯಾಗಿದ್ದಾರೆ.

## ಶರಣರ ಪ್ರಕರಣದ ಸಿಬಿಐ ತನಿಖೆಗೆ ಒಡನಾಡಿ ಒತ್ತಾಯ

ಬೆಂಗಳೂರು, ಸೆ. 4 – ಚಿತ್ರದುರ್ಗ ಮುರುಘಾ ಶರಣರ ವಿರುದ್ಧದ ಪ್ರಕರಣವನ್ನು ಸಿಬಿಐ ತನಿಖೆಗೆ ಇಲ್ಲವೇ ನ್ಯಾಯಾಂಗದ ಉಸ್ತುವಾರಿಯ ತನಿಖೆಗೆ ವಹಿಸಬೇಕು. ಆಡಳಿತದಲ್ಲಿರುವ ಕೆಲವರು ಶರಣರ ರಕ್ಷಣೆಗೆ ಕೈ ಜೋಡಿಸಿದ್ದಾರೆ ಎಂದು ಮೈಸೂರಿನ ಒಡನಾಡಿ ಸಂಸ್ಥೆ ಆರೋಪಿಸಿದೆ. ಶರಣರ ವಿರುದ್ಧದ ಪೋಕ್ಸೋ ಪ್ರಕರಣ ಬಯಲಿಗೆ ಬರಲು ಒಡನಾಡಿ ಸಂಸ್ಥೆ ಕಾರಣವಾಗಿತ್ತು.

ಮಠದ ಹಾಸ್ಟೆಲ್‌ನಿಂದ (3ನೇ ಪುಟಕ್ಕೆ)

## ನಿಷೇಧಿತ ಪ್ಲಾಸ್ಟಿಕ್ ಮಾರಾಟ, ಬಳಕೆ ಮಾಡಿದರೆ ದಂಡದ ಮೊತ್ತ ದ್ವಿಗುಣ

ದಾವಣಗೆರೆ, ಸೆ. 4- ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಸಂಗ್ರಹಣೆ, ಮಾರಾಟ ಹಾಗೂ ಬಳಕೆಯನ್ನು ಕಳೆದ ಜುಲೈ 1 ರಿಂದ ನಿಷೇಧಿಸಿದ್ದು, ಈ ಕುರಿತು ತ್ಯಾಜ್ಯ ಸಂಗ್ರಹಣಾ ವಾಹನಗಳ ಮೂಲಕ ವ್ಯಾಪಕವಾಗಿ ಪ್ರಚಾರ ನೀಡಲಾಗಿರುತ್ತದೆ. ಅಲ್ಲದೇ ಜುಲೈ ಮಾಹೆಯಲ್ಲಿ ಹಲವಾರು ಉದ್ದಿಮೆಗಳ ಪರಿವೀಕ್ಷಣೆ ನಡೆಸಿ, ಉಲ್ಲಂಘನೆದಾರರಿಂದ ಒಟ್ಟು ರೂ.3 ಲಕ್ಷ ದವರೆಗೆ ದಂಡ ವಸೂಲಿ ಮಾಡಲಾಗಿದೆ.

ನಗರದಲ್ಲಿ ನಿಷೇಧಿತ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್,

### ಪರಿಸರ ಸ್ನೇಹಿ ಬ್ಯಾಗ್ ಬಳಕೆಗೆ ಪಾಲಿಕೆ ಸೂಚನೆ

ನಾನ್ ಓವನ್ ಪಾಲಿ ಪ್ರೊಪಿಲೀನ್ ಬ್ಯಾಗ್‌ಗಳನ್ನು ಮಾರಾಟ ಮಾಡುತ್ತಿರುವುದು ಹಾಗೂ ಉಪಯೋಗಿಸುತ್ತಿರುವುದು ಕಂಡುಬಂದಿರುತ್ತದೆ. ಒಂದು ಸಾರಿ ಉಪಯೋಗಿಸಿ ಬಿಸಾಡುವ ಪ್ಲಾಸ್ಟಿಕ್ ಕಪ್, ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ನಾನ್ ಓವನ್ ಪಾಲಿ ಪ್ರೊಪಿಲೀನ್ (2ನೇ ಪುಟಕ್ಕೆ)

## ನಿರುದ್ಯೋಗ, ಹಣದುಬ್ಬರ ಕೇಂದ್ರದ ಇಬ್ಬರು ಸಹೋದರರು

### ಕಾಂಗ್ರೆಸ್ ಲೇವಡಿ

ನವದೆಹಲಿ, ಸೆ. 4 – ನಿರುದ್ಯೋಗ ಹಾಗೂ ಹಣದುಬ್ಬರಗಳು ಮೋದಿ ಸರ್ಕಾರದ ಇಬ್ಬರು ಸಹೋದರರು ಎಂದು ಕಾಂಗ್ರೆಸ್ ಪಕ್ಷ ಕೇಂದ್ರ ಸರ್ಕಾರವನ್ನು ಲೇವಡಿ ಮಾಡಿದೆ.

ಹಣದುಬ್ಬರ ಹಾಗೂ ನಿರುದ್ಯೋಗ ದೇಶದ ಜನರು ಎದುರಿಸುತ್ತಿರುವ ದೊಡ್ಡ ಸಮಸ್ಯೆಗಳಾಗಿವೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

## ಈ ವರ್ಷ 1.25 ಲಕ್ಷ ಕೋಟಿ ರೂ. ಸಿಹಿ ಮಾರಾಟದ ನಿರೀಕ್ಷೆ

ಇಂದೋರ್, ಸೆ. 4 – ಮುಂಬರುವ ಹಬ್ಬದ ದಿನಗಳಲ್ಲಿ ಸಿಹಿ ತಿನಿಸುಗಳ ಬೇಡಿಕೆ ಹೆಚ್ಚಾಗಲಿದ್ದು, ಪ್ರಸಕ್ತ ಹಣಕಾಸು ವರ್ಷದಲ್ಲಿ ಸಿಹಿ ತಿನಿಸು ಹಾಗೂ ಕುರುಕಲು ತಿಂಡಿಗಳ ವಹಿವಾಟು ದಾಖಲೆಯ 1.25 ಲಕ್ಷ ಕೋಟಿ ರೂ.ಗಳಿಗೆ ತಲುಪಬಹುದು ಎಂದು ಕೈಗಾರಿಕಾ ಒಕ್ಕೂಟವೊಂದು ಅಂದಾಜಿಸಿದೆ.

ಕಳೆದ ರಕ್ಷಾಬಂಧನ ಹಬ್ಬದ ವೇಳೆ ಸಿಹಿ ಮಾರಾಟ ಗಣನೀಯವಾಗಿ ಹೆಚ್ಚಾಗಿತ್ತು ಎಂದು ಸ್ವೀಟ್ಸ್ ಅಂಡ್ ನಮ್ಕೀನ್ ಮ್ಯಾನು ಫ್ಯಾಕ್ಚರರ್ಸ್ (2ನೇ ಪುಟಕ್ಕೆ)

## ನದಿಯಲ್ಲಿ ಕೊಚ್ಚಿ ಹೋದ ಅಕ್ಕ-ತಂಗಿ

### ಉಕ್ಕಡಗಾತ್ರಿ

ಮಲೇಬೆನ್ನೂರು, ಸೆ.4- ಸುಕ್ಷೇತ್ರ ಉಕ್ಕಡಗಾತ್ರಿಗೆ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದರ್ಶನಕ್ಕೆ ಆಗಮಿಸಿದ್ದ ಚೈತ್ರ (19) ಮತ್ತು ಪುಷ್ಪಾ (16) ಇವರು ತುಂಗಭದ್ರಾ ನದಿಯಲ್ಲಿ ಸ್ನಾನಕ್ಕೆಂದು ತೆರಳಿದಾಗ, ನಿಯಂತ್ರಣ ತಪ್ಪಿ ನೀರಿನಲ್ಲಿ ಮುಳುಗಿ ಹೋಗಿರುವ ಘಟನೆ ಭಾನುವಾರ ಮಧ್ಯಾಹ್ನ ನಡೆದಿದೆ.



ದಾವಣಗೆರೆ ತಾಲ್ಲೂಕು ಹುಚ್ಚವ್ವನಹಳ್ಳಿಯ ವೀರಚಾರಿ ಮತ್ತು ರಾಧಮ್ಮ ಇವರ ಮಕ್ಕಳಾದ ಚೈತ್ರ ಮತ್ತು ಪುಷ್ಪಾ ನದಿಯಲ್ಲಿ ಕೊಚ್ಚಿಕೊಂಡು ಹೋಗಿದ್ದು, ಇವರ ಹುಡುಕಾಟಕ್ಕೆ ತೀವ್ರ ಕಾರ್ಯಾಚರಣೆ ನಡೆದಿದೆ.

ಚೈತ್ರ ಅವರಿಗೆ 3 ತಿಂಗಳ ಹಿಂದೆ ಹೊಳಲ್ಕೆರೆ ತಾಲ್ಲೂಕು ಗುಂಡೇರಿ ಗ್ರಾಮದ ಕಾರ್ತಿಕ್ ಎಂಬುವವರ ಜೊತೆ ಮದುವೆ ಆಗಿತ್ತು ಎನ್ನಲಾಗಿದೆ. ಭಾನುವಾರ ಬೆಳಿಗ್ಗೆ ತನ್ನ ಗಂಡ ಕಾರ್ತಿಕ, ತಂಗಿ ಪುಷ್ಪಾ ಮತ್ತು ತಾಯಿ ರಾಧಮ್ಮ ಹಾಗೂ ಚೈತ್ರ ಚಿಕ್ಕಪ್ಪನ ಮಕ್ಕಳಾದ ಗಣೇಶ್, ಪಲ್ಲವಿ ಅವರೊಂದಿಗೆ ಉಕ್ಕಡಗಾತ್ರಿಗೆ ಬಂದಿದ್ದರು. ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಿ, ನಂತರ ಅಜ್ಜಯ್ಯನ ದರ್ಶನ ಮಾಡಬೇಕೆಂದು ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಮೊದಲು ಚೈತ್ರ ನಂತರ ಪುಷ್ಪಾ ಇಬ್ಬರೂ ನೀರಿನ ಸೆಳೆತಕ್ಕೆ ಸಿಲುಕಿಕೊಂಡಿದ್ದಾರೆ. ಆಗ ಕಾರ್ತಿಕ ಅವರು ಪುಷ್ಪಾ ಅವರನ್ನು ಎಳೆದು ತಂದು ತನ್ನ ಪತ್ನಿ ಚೈತ್ರಾಳನ್ನು ಕಾಪಾಡಲು ಹೋದಾಗ ಪುನಃ ಪುಷ್ಪಾ ಅಕ್ಕನನ್ನು ಕಾಪಾಡಲು ಹೋಗಿ ಅವರೂ ನೀರಿನಲ್ಲಿ ಮುಳುಗಿ ಹೋದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಕಾರ್ತಿಕ್ ಎಷ್ಟೇ ಪ್ರಯತ್ನ ಪಟ್ಟರೂ ಪತ್ನಿ (2ನೇ ಪುಟಕ್ಕೆ)

## ರಸ್ತೆ ಅಪಘಾತ : ಸೈರಸ್ ಮಿಸ್ತ್ರಿ ಸಾವು

ಮುಂಬೈ, ಸೆ. 4 - ಟಾಟಾ ಸನ್ಸ್ ಮಾಜಿ ಅಧ್ಯಕ್ಷ ಸೈರಸ್ ಮಿಸ್ತ್ರಿ ಅವರು ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಪಾಲ್ಘಾರ್ ಜಿಲ್ಲೆಯ ಮಹಾರಾಷ್ಟ್ರದಲ್ಲಿ ಡಿವೈಡರ್‌ಗೆ ಅವರ ಐಷಾರಾಮಿ ಕಾರು ಅಪ್ಪಳಿಸಿ ಅಪಘಾತ ಸಂಭವಿಸಿದೆ.

54 ವರ್ಷದ ಮಿಸ್ತ್ರಿ ಅವರನ್ನು ಟಾಟಾ ಸನ್ಸ್ ಅಧ್ಯಕ್ಷ ಸ್ಥಾನದಿಂದ 2016ರಲ್ಲಿ ಹೊರ ಹಾಕಲಾಗಿತ್ತು. ಆನಂತರದಿಂದಲೂ ಅವರು ಸಾರ್ವಜನಿಕ ಜೀವನದಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿರಲಿಲ್ಲ.

ಸ್ತ್ರೀರೋಗ ತಜ್ಞೆ ಅನಾಹಿತಾ ಪಾಂಡೋಲೆ (55) ವಾಹನ ಚಲಾಯಿಸುತ್ತಿದ್ದರು. ಅನಾಹಿತಾ ಹಾಗೂ ವಾಹನದಲ್ಲಿದ್ದ ಅವರ ಪತಿ ಡೇರಿಯಸ್ ಪಾಂಡೋಲೆ (60) ಗಾಯಗಳೊಂದಿಗೆ ಪಾರಾಗಿದ್ದಾರೆ. ಮಿಸ್ತ್ರಿ ಹಾಗೂ ಡೇರಿಯಸ್ ಸಹೋದರ ಜಹಾಂಗೀರ್ ಪಾಂಡೋಲೆ (2ನೇ ಪುಟಕ್ಕೆ)

## ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷರಾಗಿ ಮಲ್ಲೇಶಪ್ಪ



ದಾವಣಗೆರೆ, ಸೆ.4- ದಾವಣಗೆರೆ ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷರಾಗಿ ನಗರದ ಶ್ರೀ ಮಾಲತೇಶ ಮೋಟಾರ್ಸ್ ಮಾಲೀಕ ಕೆ.ಎಸ್. ಮಲ್ಲೇಶಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗೌರವಾಧ್ಯಕ್ಷರಾಗಿ ಎಸ್. ಮಂಜುನಾಥ, ಉಪಾಧ್ಯಕ್ಷರುಗಳಾಗಿ ಹೆಚ್.ಸಿ. ಮಹೇಶ್, ಜಿಲಾನ ಬೇಗ್, ಪ್ರಧಾನ ಕಾರ್ಯದರ್ಶಿಯಾಗಿ (6ನೇ ಪುಟಕ್ಕೆ)

## ಅದ್ಧೂರಿ ಮೆರವಣಿಗೆಯಲ್ಲಿ ಗಣಪ ವಿಸರ್ಜನೆ



ಹರಿಹರ, ಸೆ. 4 - ನಗರದಲ್ಲಿ ಸಾರ್ವಜನಿಕ ವಿನಾಯಕ ಮೂರ್ತಿಯನ್ನು ಅದ್ಧೂರಿ ಮೆರವಣಿಗೆ ಮೂಲಕ ತುಂಗಭದ್ರಾ ನದಿಯಲ್ಲಿ ವಿಸರ್ಜನೆ ಮಾಡಲಾಯಿತು.

ಮೆರವಣಿಗೆಯಲ್ಲಿ ರಾಜ್ಯದಾದ್ಯಂತ ಆಗಮಿಸಿದ ನಂದಿಕೋಲು, ಡೊಳ್ಳು, ಸಮಾಳ,

### ಟ್ರ್ಯಾಕ್ಟರ್ ಓಡಿಸಿದ ಶಾಸಕ ಎಸ್. ರಾಮಪ್ಪ

ಹಲಗೆ, ವೇಷಭೂಷಣ ಧರಿಸಿದ ಕಲಾವಿದರು, ಗೊಂಬೆಗಳು, ಆನೆ, ಜೊತೆಗೆ ಮಹಿಳೆಯರ ಆರತಿಯ ಮೂಲಕ ಮೆರವಣಿಗೆ ಮಾಡಲಾಯಿತು.

ಮೆರವಣಿಗೆ ಗಾಂಧಿ ಮೈದಾನದಿಂದ ಆರಂಭಗೊಂಡು, ಹಳೆ ಪಿ.ಬಿ. ರಸ್ತೆಯ ಮೂಲಕ ನಗರಸಭೆ ಮುಂಭಾಗದ ರಸ್ತೆ, ಗಾಂಧಿ ವೃತ್ತ, ರಾಣಿ ಚೆನ್ನಮ್ಮ ವೃತ್ತ, ಶಿವಮೊಗ್ಗ ರಸ್ತೆ, ದೇವಸ್ಥಾನ ರಸ್ತೆ, ಶಿಬಾರ ವೃತ್ತ , ಮೆಟ್ಟಿಲು ಹೊಳೆ ರಸ್ತೆ ಮೂಲಕ ಸಂಚರಿಸಿ ತುಂಗಭದ್ರಾ ನದಿಯನ್ನು ತಲುಪಿತು.

ಮೆರವಣಿಗೆಯಲ್ಲಿ ಶಾಸಕ ಎಸ್. ರಾಮಪ್ಪ ಸಾರ್ವಜನಿಕ ವಿನಾಯಕ ಮಹೋತ್ಸವ ಸಮಿತಿಯ ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್, ಗಣೇಶ ಮೂರ್ತಿಯ ಟ್ರ್ಯಾಕ್ಟರ್ ಓಡಿಸುವ ಮೂಲಕ ಸಾರ್ವಜನಿಕರ ಗಮನವನ್ನು ಸೆಳೆದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ನಿಖಿಲ್ ಕೊಂಡಜ್ಜಿ, ಮಹೇಶ್ವರಪ್ಪ ದೀಟೂರು, ಎಂ. ನಾಗೇಂದ್ರಪ್ಪ, ದೇವೇಂದ್ರಪ್ಪ ಕುಣೆಬೆಳಕೆರೆ, ಟಿ.ಜೆ. ಮುರುಗೇಶಪ್ಪ, ಕಾರ್ಯದರ್ಶಿ ಪ್ರವೀಣ್ ಜಿ.ವಿ. ಸಚ್ಚಿನ್ (3ನೇ ಪುಟಕ್ಕೆ)


## ಬಲ್ಲೂರು ಡಿ.ಬಿ. ಪರಶುರಾಮ್ ನಿಧನ



ಜನನ : 05-06-1963

ನಿಧನ : 04-09-2022

ದಾವಣಗೆರೆ ಜಿಲ್ಲೆ, ತಾಲ್ಲೂಕು ಜರೇಕಟ್ಟೆ ಗ್ರಾಮದ ವಾಸಿ ಶ್ರೀ ಸಾಗರ್ ಪಿ.ಬಿ. ಇವರ ತಂದೆಯವರಾದ
ಶ್ರೀ ಆಂಜನೇಯ ಸ್ವಾಮಿ ಪ್ರೌಢಶಾಲೆಯ ದೈಹಿಕ ಶಿಕ್ಷಕರಾದ
ಶ್ರೀ ಬಲ್ಲೂರು ಡಿ. ಬಿ. ಪರಶುರಾಮ್ ಅವರು
ದಿನಾಂಕ 04-09-2022ರ ಭಾನುವಾರ ರಾತ್ರಿ 8.15 ಗಂಟೆಗೆ ನಿಧನರಾದರೆಂದು ತಿಳಿಸಲು
ವಿಷಾದಿಸುತ್ತೇವೆ. ಮೃತರಿಗೆ ಸುಮಾರು 59 ವರ್ಷ ವಯಸ್ಸಾಗಿತ್ತು.
ಮೃತರು ಧರ್ಮಪತ್ನಿ ಮತ್ತು ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು
ಮತ್ತು ಸಹೋದರ-ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 05-09-2022ರ ಸೋಮವಾರ
ಮಧ್ಯಾಹ್ನ 1-30 ಗಂಟೆಗೆ ಸ್ವಗ್ರಾಮ ಜರೇಕಟ್ಟೆಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

ಧರ್ಮಪತ್ನಿ : ಶ್ರೀಮತಿ ಶಶಿಕಲಾ ಪರಶುರಾಮ್, ಮಾಜಿ ಅಧ್ಯಕ್ಷರು ಮತ್ತು ಹಾಲಿ ಸದಸ್ಯರು, ಮುದಹದಡಿ ಗ್ರಾಮ ಪಂಚಾಯಿತಿ.
ಪುತ್ರ : ಶ್ರೀ ಸಾಗರ್ ಪಿ.ಬಿ. ಮತ್ತು ಶ್ರೀಮತಿ ಪ್ರೀತಿ ಸಾಗರ್
ಪುತ್ರಿ : ಶ್ರೀಮತಿ ಸೌಮ್ಯ ಮತ್ತು ಶ್ರೀ ಕುಮಾರ್ ಪಿಸಾಳೆ, ದಾವಣಗೆರೆ
ಮೊಬೈಲ್ : 73376 40333, 97394 32729

# ಹರಿಹರ : ನಕಲಿ ಸಾಲ ಸೃಷ್ಟಿ ! ಪರಿಹಾರ ನೀಡಲು ಗ್ರಾಹಕರ ಆಯೋಗ ಆದೇಶ

ಹರಿಹರ, ಸೆ.4- ಗೃಹೋಪಯೋಗಿ ವಸ್ತುಗಳ ಖರೀದಿಸುವ ಗ್ರಾಹಕರ ಹೆಸರಿನಲ್ಲಿ ನಕಲಿ ಸಾಲ ಸೃಷ್ಟಿಸಿ, ಅವರ ಖಾತೆಯಿಂದ ಹಣ ಕಡಿತ ಮಾಡಿಕೊಳ್ಳುತ್ತಿದ್ದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಜಿಲ್ಲಾ ಗ್ರಾಹಕರ ಆಯೋಗ ಸಂತ್ರಸ್ತ ಗ್ರಾಹಕರಿಗೆ ತಲಾ 25 ಸಾವಿರ ರೂ. ಪರಿಹಾರ ನೀಡುವಂತೆ ಬಜಾಜ್ ಫೈನಾನ್ಸ್ ಮತ್ತು ಅಶ್ವಿನಿ ಎಲೆಕ್ಟ್ರಾನಿಕ್ಸ್‌ಗೆ ಆದೇಶಿಸಿದೆ.

**ಪ್ರಕರಣದ ವಿವರ :** ನಗರದ ವಾಸಿ ಕೆ.ಜಿ.ಮುನೀಂದ್ರ ಮತ್ತು ಎಂ.ಕೆ.ಸ್ವಾಮಿ ಎಂಬ ಇಬ್ಬರು ಸ್ನೇಹಿತರು 2016ರ ಅಕ್ಟೋಬರ್‌ನಲ್ಲಿ ಎರಡು ಟೆಲಿವಿಷನ್ ಖರೀದಿಸಲು ಹರಿಹರದ ಅಶ್ವಿನಿ ಎಲೆಕ್ಟ್ರಾನಿಕ್ಸ್‌ಗೆ ಹೋದಾಗ, ಅಂಗಡಿಯವರು ಬಜಾಜ್ ಫೈನಾನ್ಸ್‌ನ ಶೂನ್ಯ ಬಡ್ಡಿ ದರದ ಸಾಲ ಸೌಕರ್ಯದ ಬಗ್ಗೆ ತಿಳಿಸಿ, ಇಬ್ಬರ ಪ್ರತ್ಯೇಕ ಅರ್ಜಿ ಮತ್ತು ದಾಖಲೆಗಳನ್ನು ಪಡೆದುಕೊಂಡಿದ್ದರು. ವಾರದ ನಂತರ, ಕ್ರೆಡಿಟ್ ಸ್ಕೋರ್ ಕಡಿಮೆ ಇರುವುದರಿಂದ ನಿಮಗೆ ಸಾಲ ಮಂಜೂರಾಗಿಲ್ಲ ಎಂದು ತಿಳಿಸಿದ್ದರಿಂದ ಇಬ್ಬರೂ ನಗದು ಹಣ ಪಾವತಿಸಿ ಟಿವಿ ತಂದಿದ್ದರು. ಆದರೆ, 2017ರ ಮಾರ್ಚ್ ತಿಂಗಳಿನಿಂದ ಮುನಿಂದ್ರರ ಬ್ಯಾಂಕ್ ಖಾತೆಯಿಂದ 5,506 ರೂ.ಗಳ ಮತ್ತು ಎಂ.ಕೆ.ಸ್ವಾಮಿ ಖಾತೆಯಿಂದ 5,481 ರೂ.ಗಳ ಮಾಸಿಕ ಕಂತುಗಳು ಕಡಿತವಾಗತೊಡಗಿದವು. ಕೂಡಲೇ ಇಬ್ಬರೂ ಬಜಾಜ್ ಫೈನಾನ್ಸ್ ಕಚೇರಿಯಲ್ಲಿ ವಿಚಾರಿಸಿದಾಗ, ಖಾತೆ ಸಂಖ್ಯೆ ವ್ಯತ್ಯಾಸವಾಗಿ, ತಪ್ಪಾಗಿ ನಿಮ್ಮ ಖಾತೆಯ ಹಣ ಕಡಿತವಾಗಿದೆ. ಕಡಿತವಾದ ಪೂರ್ತಿ ಹಣ ವಾಪಾಸ್ ಹಾಕುತ್ತೇವೆ. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇವೆಂದು ಭರವಸೆ ನೀಡಿದ್ದರು.

ನಂತರ ಎಂ.ಕೆ.ಸ್ವಾಮಿ ಖಾತೆಗೆ ಒಂದು ಕಂತಿನ ಹಣ ಮಾತ್ರ ವಾಪಾಸ್ ಹಾಕಿದ್ದು, ಬಾಕಿ ಹಣ ನೀಡಿರಲಿಲ್ಲ. ಮುನಿಂದ್ರಾರಿಗೆ ಹಣ ವಾಪಾಸ್ ನೀಡುವ ಬದಲು 2019ರ ಜುಲೈನಲ್ಲಿ ಮತ್ತೊಂದು ಕಂತು ಹಣ ಕಡಿತ ಮಾಡಿಕೊಳ್ಳಲಾಗಿತ್ತು. ಈ ಕುರಿತು ಪರಿಶೀಲಿಸಿದಾಗ ಟಿವಿ ಕೊಳ್ಳುವಾಗ ಇಬ್ಬರೂ ಸ್ನೇಹಿತರು ನೀಡಿದ್ದ ಸಾಲದ ಅರ್ಜಿ ಮತ್ತು ಜೆರಾಕ್ಸ್ ದಾಖಲೆಗಳನ್ನು ದುರ್ಬಳಕೆ ಮಾಡಿಕೊಂಡು, 65,500 ರೂ. ಮೊತ್ತದ ಎರಡು ನಕಲಿ ಸಾಲ ಸೃಷ್ಟಿಸಿ, ಅದಕ್ಕೆ ಹಣ ಜಮೆ ಮಾಡಿಕೊಳ್ಳುತ್ತಿರುವುದು ತಿಳಿಯಿತು.

ಇಬ್ಬರೂ 05.09.2020 ರಂದು ಗ್ರಾಹಕರ ಆಯೋಗದಲ್ಲಿ ಬಜಾಜ್ ಫೈನಾನ್ಸ್ ಮತ್ತು ಮತ್ತು ಅಶ್ವಿನಿ ಎಲೆಕ್ಟ್ರಾನಿಕ್ಸ್ ವಿರುದ್ಧ ಪರಿಹಾರ ಕೋರಿ ಪ್ರತ್ಯೇಕ ದೂರು ದಾಖಲಿಸಿದ್ದರು. ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ಹೆಚ್.ಎನ್. ಮೀನಾ, ಸದಸ್ಯರಾದ ಸಿ.ಎಸ್.ತ್ಯಾಗರಾಜನ್, ಬಿ.ಯು. ಗೀತಾ 30 ದಿನದೊಳಗೆ ನಕಲಿ ಸಾಲಕ್ಕೆ ಕಡಿತ ಮಾಡಿಕೊಳ್ಳಲಾಗಿದ್ದ ಮುನಿಂದ್ರಾರ 24,590 ರೂ., ಎಂ.ಕೆ.ಸ್ವಾಮಿಯವರ 8,714 ರೂ.ಗಳನ್ನು ಶೇ. 9ರ ಬಡ್ಡಿ ಸಮೇತ ಹಿಂತಿರುಗಿಸಲು ಮತ್ತು ಇಬ್ಬರೂ ದೂರುದಾರರಿಗೆ ತಲಾ 25 ಸಾವಿರ ಪರಿಹಾರ ನೀಡಲು ಮಂಗಳವಾರ ಆದೇಶಿಸಿದ್ದಾರೆ.

ದೂರುದಾರರ ಪರ ನಗರದ ವಕೀಲರಾದ ಬಿ.ಎಂ.ಸಿದ್ದಲಿಂಗಸ್ವಾಮಿ, ಟಿ. ಇನಾಯತ್‌ಉಲ್ಲಾ, ಜಿ.ಹೆಚ್. ಭಾಗೀರಥಿ ವಾದ ಮಂಡಿಸಿದ್ದರು.

### ಸುಳ್ಳು ಸಾಕ್ಷ್ಯ ಸಲ್ಲಿಸಿದ್ದರ ವಿರುದ್ಧ ದೂರು

ದೂರು ದಾಖಲಿಸಿದ ನಂತರ ಬಜಾಜ್ ಫೈನಾನ್ಸ್‌ನವರು ಆಯೋಗಕ್ಕೆ ಸಲ್ಲಿಸಿದ್ದ ತಮ್ಮ ತಕರಾರು ಪತ್ರ ಮತ್ತು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ, ಖಾತೆಯಿಂದ ಕಡಿತ ಮಾಡಿಕೊಂಡಿದ್ದ 21,935 ರೂ.ಗಳನ್ನು 30.10.2020 ರಂದು ಹಿಂತಿರುಗಿಸಿದ್ದಾಗಿ ಪ್ರಮಾಣೀಕರಿಸಿದ್ದರು. ಆದರೆ, ಅದಕ್ಕೆ ಯಾವುದೇ ದಾಖಲೆ ನೀಡದ ಕಾರಣ ಆಯೋಗ ಅದನ್ನು ಒಪ್ಪಿಲ್ಲ. ತಮಗೆ ಯಾವುದೇ ಹಣ ನೀಡದಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಸಲ್ಲಿಸಿ, ಪ್ರಮಾಣ ಮಾಡಿರುವ ಬಜಾಜ್ ಫೈನಾನ್ಸ್ ವಿರುದ್ಧ ಕ್ರಿಮಿನಲ್ ವಿಚಾರಣೆ ನಡೆಸಲು ಆಯೋಗಕ್ಕೆ ಲಿಖಿತ ದೂರು ಸಲ್ಲಿಸಿರುವುದಾಗಿ ದೂರುದಾರ ಮುನೀಂದ್ರ ತಿಳಿಸಿದ್ದಾರೆ.

# ಖಾಸಗಿ ವಲಯದ ಬಾಹ್ಯಾಕಾಶದ ಬೆಳವಣಿಗೆಯಲ್ಲಿ ಭಾರತದ ಪಾಲು ನಾಲ್ಕು ಪಟ್ಟು ಹೆಚ್ಚಳದ ನಿರೀಕ್ಷೆ

ನವದೆಹಲಿ, ಸೆ. 4 – ಜಾಗತಿಕ ಬಾಹ್ಯಾಕಾಶ ವಲಯದ ಆರ್ಥಿಕತೆಯಲ್ಲಿ ಭಾರತದ ಪಾಲು ಕೇವಲ ಶೇ.2ರಷ್ಟಿದೆ. ಆದರೆ, ಖಾಸಗಿ ವಲಯದ ಕಠಿಣ ಪರಿಶ್ರಮದಿಂದ ಈ ಪಾಲು ಶೇ.8ರವರೆಗೆ ತಲುಪಬಹುದು ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋದ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಹೊಸ ಬಾಹ್ಯಾಕಾಶ ನೀತಿಯನ್ನು ಶೀಘ್ರದಲ್ಲೇ ಅನಾವರಣಗೊಳಿಸಲಿದೆ. ಇದರೊಂದಿಗೆ ಖಾಸಗಿ ವಲಯ ಎದುರಿಸುತ್ತಿರುವ ಬಹುತೇಕ ನಿರ್ಬಂಧಗಳು ತೆರವಾಗಲಿವೆ. ನಂತರದಲ್ಲಿ ಖಾಸಗಿ ವಲಯ ಉಪಗ್ರಹಗಳ ಉತ್ಪಾದನೆ, ಟ್ರಾನ್ಸ್‌ಪಾಂಡರ್‌ಗಳ ಗುತ್ತಿಗೆ, ರಾಕೆಟ್‌ಗಳ ನಿರ್ಮಾಣ ಹಾಗೂ ಬಾಹ್ಯಾಕಾಶ ಶೋಧದ ಉಪಕರಣಗಳನ್ನು ಉತ್ಪಾದಿಸಬಹುದು.

ಖಾಸಗಿ ವಲಯ ಬಾಹ್ಯಾಕಾಶ ವಲಯದಲ್ಲಿ ಪ್ರಮುಖ ಪಾತ್ರ ವಹಿಸುವಂತೆ ಉತ್ತೇಜನ ನೀಡುವುದು ಬಾಹ್ಯಕಾಶ ನೀತಿಯ ಪ್ರಮುಖ ಉದ್ದೇಶವಾಗಿದೆ ಎಂದು ಇಂಡಿಯನ್ ನ್ಯಾಷನಲ್ ಸ್ಪೇಸ್ ಪ್ರೊಮೋಷನ್ ಅಂಡ್ ಆಥೊರೈಸೇಷನ್ ಸೆಂಟರ್ (ಐ.ಎನ್. - ಎಸ್.ಪಿ.ಎ.ಸಿ.ಇ.) ಅಧ್ಯಕ್ಷ ಪವನ್ ಕುಮಾರ್ ಗೋಯಂಕ ಹೇಳಿದ್ದಾರೆ.

ಬಾಹ್ಯಾಕಾಶ ವಲಯದ ವಾಣಿಜ್ಯ ಉದ್ದೇಶಕ್ಕೆ ತಂತ್ರಜ್ಞಾನ ಅಭಿವೃದ್ಧಿಪಡಿಸುವಲ್ಲಿ ಇಸ್ರೋ ಇನ್ನಷ್ಟು ಪ್ರಮುಖ ಪಾತ್ರ ವಹಿಸಲು ಅವಕಾಶಗಳಿವೆ ಎಂದು ಗೋಯಂಕ ಹೇಳಿದ್ದಾರೆ.

ಬಾಹ್ಯಾಕಾಶ ವಲಯದ ಬಗ್ಗೆ ಭಾರತದಲ್ಲಿ ಸಾಕಷ್ಟು ಆಸಕ್ತಿ ಇದೆ. ನಮ್ಮ ಬಳಿ 100ರಷ್ಟು ನವೋದ್ಯಮಗಳಿವೆ. ಇವುಗಳಲ್ಲಿ ಮೂರನೇ ಎರಡರಷ್ಟನ್ನು ಎರಡು ವರ್ಷಗಳ ಹಿಂದೆ ಸ್ಥಾಪಿಸಲಾಗಿದೆ ಎಂದವರು ತಿಳಿಸಿದ್ದಾರೆ.

ಭಾರತ ಉಪಗ್ರಹ ಉತ್ಪಾದನೆಯ ತಾಣವಾಗುವ ಆಶಯ ಹೊಂದಬಹುದಾಗಿದೆ. ಭಾರತವು ವಿಶ್ವದ ಹಲವಾರು ರೀತಿಯ ಉಪಗ್ರಹಗಳ ಉಡಾವಣೆಯ ತಾಣವಾಗಬಹುದು. ಸಣ್ಣ ಉಪಗ್ರಹಗಳಿಂದ ಜಿ.ಎಸ್.ಎಲ್.ವಿ.ವರೆಗೆ ಹಲವಾರು ರೀತಿ ಉಪಗ್ರಹಗಳ ಉಡಾವಣೆ ದೇಶದಲ್ಲಿ ಸಾಧ್ಯವಿದೆ ಎಂದು ಗೋಯಂಕ ಹೇಳಿದ್ದಾರೆ.

ಬಾಹ್ಯಾಕಾಶ ವಲಯದಲ್ಲಿ ಖಾಸಗಿ ವಲಯಕ್ಕೆ ಹೆಚ್ಚಿನ ಉತ್ತೇಜನ ನೀಡುವ ಸಲುವಾಗಿ 2020ರಲ್ಲಿ ಐ.ಎನ್. - ಎಸ್.ಪಿ.ಎ.ಸಿ.ಇ. ಸಂಸ್ಥೆಯನ್ನು ಸ್ಥಾಪಿಸಲಾಗಿತ್ತು. ಇದು ಸ್ವತಂತ್ರ, ಏಕಗವಾಕ್ಷಿ ಹಾಗೂ ನೋಡಲ್ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಭಾರತೀಯ ಉಪಗ್ರಹ ವ್ಯವಸ್ಥೆ ಉತ್ಪಾದಿಸಲು, ಇಸ್ರೋದ ಸೌಲಭ್ಯಗಳನ್ನು ಖಾಸಗಿ ಕಂಪನಿಗಳು ಬಳಸಲು ಹಾಗೂ ಖಾಸಗಿ ವಲಯ ರಾಕೆಟ್ ಅಭಿವೃದ್ಧಿ ಪಡಿಸಲು ಈ ಸಂಸ್ಥೆಯು ಅನುಮತಿ ನೀಡುತ್ತಿದೆ.

ಅಮೆರಿಕದಲ್ಲಿ ಬಾಹ್ಯಾಕಾಶ ವಲಯವು ಅಲ್ಲಿನ ಸರ್ಕಾರಿ ಸಂಸ್ಥೆ ಎನ್.ಎ.ಎಸ್.ಎ.ದಿಂದ ಖಾಸಗಿ ವಲಯಕ್ಕೆ ಪರಿವರ್ತನೆಯಾಗಲು ಹತ್ತು ವರ್ಷ ಬೇಕಾಯಿತು. ಖಾಸಗಿ ವಲಯಕ್ಕೆ ಬಾಹ್ಯಾಕಾಶವನ್ನು ಮುಕ್ತಗೊಳಿಸುವುದರೊಂದಿಗೆ, ಅಮೆರಿಕ ಈಗಿರುವ ಸ್ಥಾನಕ್ಕೆ ಭಾರತ 10-15 ವರ್ಷಗಳಲ್ಲಿ ಬರಬಹುದು ಎಂದು ಗೋಯಂಕ ಅಂದಾಜಿಸಿದ್ದಾರೆ.

ಬಾಹ್ಯಾಕಾಶ ವಲಯವನ್ನು ಖಾಸಗಿ ವಲಯಕ್ಕೆ ಮುಕ್ತಗೊಳಿಸಿದ ನಂತರ ಎನ್.ಎಸ್.ಐ.ಎಲ್. ಸಂಸ್ಥೆಯು ಕಳೆದ ಜೂನ್ 22ರಂದು ವಾಣಿಜ್ಯ ಉದ್ದೇಶಕ್ಕೆ ಸೀಮಿತವಾದ ಜಿ.ಎಸ್.ಎ.ಟಿ. -24 ಅನ್ನು ಉಡಾವಣೆ ಮಾಡಿತ್ತು. ಇಡೀ ಉಪಗ್ರಹವನ್ನು ಟಾಟಾ ಪ್ಲೈ ಸಂಸ್ಥೆಗೆ 15 ವರ್ಷಗಳ ಗುತ್ತಿಗೆಗೆ ನೀಡಲಾಗಿತ್ತು.

ನಂತರದಲ್ಲಿ ಜೂನ್ 30ರಂದು ಎನ್.ಎಸ್.ಐ.ಎಲ್. ಎರಡನೇ ವಾಣಿಜ್ಯ ಉಪಗ್ರಹ ಉಡಾವಣೆ ಮಾಡಿತ್ತು. ಆ ಸಂದರ್ಭದಲ್ಲಿ ಪಿ.ಎಸ್.ಎಲ್.ವಿ. ಮೂಲಕ ಮೂರು ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ರವಾನಿಸಲಾಗಿತ್ತು.

ಇಸ್ರೋದ ಸೌಲಭ್ಯ ಬಳಸುವಲ್ಲಿ ನವೋದ್ಯಮಗಳಿಗೆ ಹೆಚ್ಚಿನ ಪ್ರೋತ್ಸಾಹದ ಅಗತ್ಯವಿದೆ. ಈ ಬಗ್ಗೆ ನಾವು ಗಮನ ಹರಿಸಲಿದ್ದೇವೆ ಎಂದು ಗೋಯಂಕ ತಿಳಿಸಿದ್ದಾರೆ.

ಪ್ರಸಕ್ತ ಇಸ್ರೋಗೆ ಸರಕುಗಳನ್ನು ಪೂರೈಸುತ್ತಿರುವ ಕಂಪನಿಗಳೇ ಪಿ.ಎಸ್.ಎಲ್.ವಿ. ಹಾಗೂ ಜಿ.ಎಸ್.ಎಲ್.ವಿ. ರೀತಿಯ ರಾಕೆಟ್ ಉತ್ಪಾದಿಸುವ ಬೃಹತ್ ಕಾರ್ಯಕ್ಕೆ ಮುಂದಾಗಬಹುದು. ಇವುಗಳು ನವೋದ್ಯಮಗಳನ್ನು ಪೋಷಿಸುವ ಕಾರ್ಯವನ್ನೂ ಮಾಡಬಹುದು ಎಂದು ಗೋಯಂಕ ಸಲಹೆ ನೀಡಿದ್ದಾರೆ.

ಶ್ರೀಹರಿಕೋಟದಲ್ಲಿ ಮೂರನೇ ಉಡಾವಣಾ ಕೇಂದ್ರ ಸ್ಥಾಪಿಸಲು ಹಾಗೂ ತೂತುಕುಡಿಯಲ್ಲಿ ಮತ್ತೊಂದು ಬಾಹ್ಯಾಕಾಶ ಕೇಂದ್ರ ತೆರೆಯಲು ಇಸ್ರೋ ಪರಿಶೀಲಿಸುತ್ತಿದೆ ಎಂದೂ ಅವರು ಹೇಳಿದ್ದಾರೆ.

# ಹಾಲಿವಾಣ ಗ್ರಾ.ಪಂ. ಅಧ್ಯಕ್ಷ ಬಿಜೆಪಿ ಸೇರ್ಪಡೆ



ಮಲೇಬೆನ್ನೂರು, ಸೆ.4- ಹಾಲಿವಾಣ ಗ್ರಾ.ಪಂ. ನೂತನ ಅಧ್ಯಕ್ಷರಾಗಿ ಬಿಜೆಪಿ ಬೆಂಬಲದೊಂದಿಗೆ ಆಯ್ಕೆಯಾಗಿರುವ ಕೊಮಾರನಹಳ್ಳಿಯ ಮಡಿವಾಳರ ಬಸವರಾಜ್ ಅವರು ಭಾನುವಾರ ಮಾಜಿ ಶಾಸಕ ಬಿ.ಪಿ.ಹರೀಶ್ ಅವರ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಯಾದರು.

ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ತಾ. ಮಡಿವಾಳ ಸಮಾಜದ ಅಧ್ಯಕ್ಷ ಕುಣಿಬೆಳಕೆರೆ ಮಲ್ಲೇಶಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಐ.ಪಿ.ರಂಗನಾಥ್, ಮುಖಂಡರಾದ ಐರಣಿ ಮಹೇಶ್ವರಪ್ಪ, ರಾಮಣ್ಣ ಸ್ವಾಮಿ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

### ಗುರು ಸ್ಮರಣೆ...

ಮುಗ್ಧ ಮನಸಿನ ಪುಟದೊಳಗೆ ಅಕ್ಷರವ ಬರೆಸಿ
ಮುರಿದ ಹಲ್ಲಿನ ತುಟಿಯ ಅಂಚಲ್ಲಿ ನಗುವ ತರಿಸಿ
ಅಳುವ ಕಣ್ಣುಗಳ ನೀರು ಒರೆಸಿ
ಯಾರಿಲ್ಲವೆಂದರು ನಾನಿರುವೆನೆಂಬ ಭಾವದಿ ಸಂತೈಸಿದ
ಗುರುವೇ ನಿಮಗೆ ನಮನ

ಬಾಳ ದಾರಿಯಲ್ಲಿ ಬೆಳಕಿನ ದೀವಿಗೆ ಹಿಡಿದಾತ
ನಮ್ಮೆಲ್ಲ ತಪ್ಪುಗಳ ಸರಿಪಡಿಸುತ ನಮಗಾಗಿ ತನ್ನ ಸರ್ವಸ್ವ
ಅರ್ಪಿಸಿಕೊಳ್ಳುತ
ಗುರುವಾಗಿ ನಡೆದ ಮುಗುಳು ನಗು ಚೆಲ್ಲುತ

ಗುರುವು ನಡೆಡೆದೆ ಅದುವೇ ವಿಶ್ವ ಮಾನವೀಯತೆಯ ಪಥ
ಪ್ರೀತಿ ಕರುಣೆ ವಾತ್ಸಲ್ಯ ತುಂಬಿದ ರಥ
ಜಾಗವಿಲ್ಲ ಅಲ್ಲಿ ಯಾವುದೇ ಜಾತಿ ಮತ
ಇರುವುದೊಂದೇ ಅದೇ ಮನುಜ ಮತ

ಗುರುವೆಂದರೆ ವಿಶ್ವ ಚೇತನ
ಅವರ ವಿಚಾರಗಳೆಲ್ಲ ನವ ನವೀನ
ತುಂಬುವರು ಎಲ್ಲರ ಬಾಳಲ್ಲಿ ಸುಜ್ಞಾನ
ಬೆಳಗುವರು ಎಲ್ಲರ ಮನೆ ಮನ.

- ಬಸವರಾಜ. ಕರುವಿನ ಬಸವನಾಳು

# ನದಿಯಲ್ಲಿ ಕೊಚ್ಚಿ ಹೋದ ಅಕ್ಕ-ತಂಗಿ



**(1ನೇ ಪುಟದಿಂದ)** ಚೈತ್ರಾಳನ್ನು ಕಾಪಾಡಲು ಆಗಲಿಲ್ಲ. ಈ ಇಬ್ಬರೂ ನೀರಿನಲ್ಲಿ ಮುಳುಗಿ ಹೋಗುವ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆ ಆಗಿದ್ದು, ಸ್ಥಳದಲ್ಲಿದ್ದ ಬೇರೆ ಭಕ್ತರು ಅಸಹಾಯಕರಾಗಿ ನಿಂತಿದ್ದಾರೆ. ಕಾರ್ತಿಕ್ ಒಬ್ಬರೇ ಇಬ್ಬರ ಜೀವ ಉಳಿಸಲು ಹೋರಾಟ ಮಾಡಿ, ವಿಫಲನಾಗಿದ್ದಾನೆ.

ಘಟನೆಯ ವಿಷಯ ತಿಳಿದ ತಕ್ಷಣ ದೇವಸ್ಥಾನದ ಕಾರ್ಯದರ್ಶಿ ಸುರೇಶ್ ಅವರು, ಪೊಲೀಸ್ ಇಲಾಖೆ ಹಾಗೂ ಅಗ್ನಿ ಶಾಮಕ ದಳದವರಿಗೆ ವಿಷಯ ತಿಳಿಸಿದ್ದಾರೆ. ಕೂಡಲೇ ಆಗಮಿಸಿದ ಎಎಸ್ಪಿ ಕನ್ನಿಕಾ ಸಕ್ರಿವಾಲ್, ತಹಶೀಲ್ದಾರ್ ಡಾ. ಬಿ.ಎಂ.ಅಶ್ವತ್ಥ್, ಸಿಪಿಐ ಸತೀಶ್ ಕುಮಾರ್, ಪಿಎಸ್ಐ ರವಿಕುಮಾರ್, ಕಂದಾಯ ನಿರೀಕ್ಷಕ ಆನಂದ್ ಅವರು ಅಗ್ನಿ ಶಾಮಕ ಸಿಬ್ಬಂದಿ ಹಾಗೂ ಎಸ್‌ಡಿಆರ್‌ಎಫ್ ತಂಡ ನೀರಿನಲ್ಲಿ ಮುಳುಗಿ ಹೋಗಿರುವ ಚೈತ್ರಾ, ಪುಷ್ಪಾ ಅವರ ಪತ್ತೆಗಾಗಿ ಕಾರ್ಯಾಚರಣೆ ನಡೆಸಿದರು. ರಾತ್ರಿ 8 ಗಂಟೆವರೆಗೂ ಹುಡುಕಾಟ ನಡೆಸಿದರೂ ಮೃತದೇಹಗಳು ಪತ್ತೆಯಾಗಿಲ್ಲ. ಸೋಮವಾರವೂ ಕಾರ್ಯಾಚರಣೆ ಮುಂದುವರೆಯಲಿದೆ ಎಂದು ಪಿಎಸ್ಐ ರವಿಕುಮಾರ್ ತಿಳಿಸಿದ್ದಾರೆ.

ಕಳೆದ ತಿಂಗಳಿನಲ್ಲೂ ಇದೇ ರೀತಿ ಘಟನೆ ನಡೆದು, ಚನ್ನಗಿರಿ ತಾಲ್ಲೂಕು ರಾಮಗೊಂಡನಹಳ್ಳಿ ತಾಂಡಾದ ಪರಮೇಶ್ವರ ನಾಯ್ಕ (35) ಎಂಬಾತ ತುಂಗಭದ್ರಾ ನದಿಯಲ್ಲಿ ಕೊಚ್ಚಿ ಹೋಗಿದ್ದ ಆತನಿಗಾಗಿ 2-3 ದಿನಗಳ ಹುಡುಕಾಟ ನಡೆಸಿದ್ದರೂ ಮೃತದೇಹ ಪತ್ತೆಯಾಗಿರಲಿಲ್ಲ.

**ಸೂಚನೆ :** ತುಂಗಭದ್ರಾ ನದಿಯಲ್ಲಿ ಈ ರೀತಿ ಘಟನೆ ಮರುಕಳಿಸಿದಂತೆ ಎಚ್ಚರ ವಹಿಸುವಂತೆ ಉಕ್ಕಡಗಾತ್ರಿ ಶ್ರೀ ಕರಿಬಸವೇಶ್ವರ ಅಜ್ಜಯ್ಯನ ದೇವಸ್ಥಾನ ಕಮಿಟಿಯವರಿಗೆ ಎಎಸ್ಪಿ ಕನ್ನಿಕಾ ಸಕ್ರಿವಾಲ್ ಸೂಚನೆ ನೀಡಿದ್ದು, ನದಿಯಲ್ಲಿ ಜಾಲರಿ ಅಳವಡಿಸುವಂತೆ ತಿಳಿಸಿದ್ದಾರೆ.

**ಆಕ್ರಂದನ :** ತನ್ನ ಇಬ್ಬರೂ ಮಕ್ಕಳನ್ನು ಕಳೆದುಕೊಂಡ ವೀರಚಾರಿ, ರಾಧಮ್ಮ ಮತ್ತು ಪತ್ನಿ ಕಳೆದುಕೊಂಡ ಕಾರ್ತಿಕ್‌ನ ಆಕ್ರಂದನ ಮುಗಿಲು ಮುಟ್ಟಿತ್ತು.

### ರೈತರಿಗೆ ವಿವಿಧ ಪಶುಸಂಗೋಪನಾ ಚಟುವಟಿಕೆ ಕುರಿತು ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ನಗರದ ಪಶು ಆಸ್ಪತ್ರೆ ಅವರಣದಲ್ಲಿರುವ ರೈತರಿಗೆ ಪಶುಸಂಗೋಪನಾ ಚಟುವಟಿಕೆ ಕುರಿತು ತರಬೇತಿ ಶಿಬಿರ ನಡೆಯಲಿದೆ.

ಇಂದಿನಿಂದ ಇದೇ ದಿನಾಂಕ 13 ರವರೆಗೆ ಕುರಿ ಮತ್ತು ಮೇಕೆ ಸಾಕಾಣಿಕೆ ಬಗ್ಗೆ ತರಬೇತಿ, ಆಧುನಿಕ ಹೈನುಗಾರಿಕೆ ಬಗ್ಗೆ ತರಬೇತಿ ಕಾರ್ಯಕ್ರಮದಲ್ಲಿ ತಲಾ 25 ಜನರಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ.

ವಿವರಕ್ಕ ಸಂಪರ್ಕಿಸುವ ದೂರವಾಣಿ 08192-233787.

### ಜಿಲ್ಲೆಯಲ್ಲಿ ಮದ್ಯ ಮಾರಾಟ ನಿಷೇಧ

ದಾವಣಗೆರೆ, ಸೆ.4- ಗಣೇಶ ವಿಸರ್ಜನೆ ಮೆರವಣಿಗೆ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಮದ್ಯ ಮಾರಾಟ ಮತ್ತು ಸರಬರಾಜನ್ನು ದಿನಾಂಕ 8 ರ ಗುರುವಾರ ಬೆಳಿಗ್ಗೆ 6 ರಿಂದ ಮಧ್ಯರಾತ್ರಿ 12 ಗಂಟೆವರೆಗೆ ನಿಷೇಧಗೊಳಿಸಲು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಆದೇಶಿಸಿದ್ದಾರೆ.

# 1.25 ಲಕ್ಷ ಕೋಟಿ ಸಿಹಿ ಮಾರಾಟದ ನಿರೀಕ್ಷೆ

**(1ನೇ ಪುಟದಿಂದ)** ಫೆಡರೇಷನ್ ನಿರ್ದೇಶಕ ಫಿರೋಜ್ ಹೆಚ್. ನಕ್ವಿ ಹೇಳಿದ್ದಾರೆ. ಗಣೇಶ ಚತುರ್ಥಿಯ ವೇಳೆಯಲ್ಲೂ ಸಿಹಿ ಬೇಡಿಕೆ ಹೆಚ್ಚಾ ಗಿದೆ. ಮುಂಬರುವ ದಸರಾ ಹಾಗೂ ದೀಪಾವಳಿಗಳಲ್ಲೂ ಬೇಡಿಕೆ ಹೆಚ್ಚಾಗಿರಲಿದೆ ಎಂದವರು ಹೇಳಿದ್ದಾರೆ.

ಇದರಿಂದಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಸಿಹಿ ತಿನಿಸುಗಳ ಮಾರಾಟ ದಾಖಲೆಯ 1.25 ಲಕ್ಷ ಕೋಟಿ ರೂ.ಗಳಿಗೆ ತಲುಪಬಹುದು ಎಂದು ನಕ್ವಿ ಹೇಳಿದ್ದಾರೆ. ಹಣದುಬ್ಬರದಿಂದ ಆಗುತ್ತಿರುವ ಹೊರೆ ಕುರಿತ ಪ್ರಶ್ನೆಗೆ ಉತ್ತರಿಸಿರುವ ಅವರು, ಜನರು ಆಭರಣ ಹಾಗೂ ಬಟ್ಟೆಗಳ ಮೇಲಿನ ವೆಚ್ಚ ಕಡಿಮೆ ಮಾಡಬಹುದು. ಆದರೆ, ಹಬ್ಬದ ದಿನಗಳಲ್ಲಿ ಸಿಹಿ ತಿನಿಸುಗಳ ಬಳಕೆ ಅನಿವಾರ್ಯವಾಗಿರುತ್ತದೆ ಎಂದಿದ್ದಾರೆ.

ಕಳೆದ ಎರಡು ವರ್ಷಗಳಲ್ಲಿ ಕೊರೊನಾ ಕಾರಣದಿಂದ ಸಿಹಿ ತಿನಿಸುಗಳ ಬೇಡಿಕೆಯಲ್ಲಿ ಕುಸಿತವಾಗಿತ್ತು. 2020-21ರಲ್ಲಿ 35 ಸಾವಿರ ಕೋಟಿ ರೂ.ಗಳ ನಷ್ಟವಾಗಿತ್ತು. ಆ ವರ್ಷ ಒಟ್ಟಾರೆ ಸಿಹಿ ತಿನಿಸುಗಳ ವಹಿವಾಟು 65 ಸಾವಿರ ಕೋಟಿ ರೂ. ಕಡಿಮೆಯಾಗಿತ್ತು ಎಂದವರು ಹೇಳಿದ್ದಾರೆ.

2021-22ರಲ್ಲಿ ಸಿಹಿ ತಿನಿಸುಗಳ ವಹಿವಾಟು 1.10 ಲಕ್ಷ ಕೋಟಿ ರೂ.ಗಳಿಗೆ ಏರಿಕೆಯಾಗಿತ್ತು. ಈ ವರ್ಷ ಮಾರಾಟ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದವರು ಹೇಳಿದ್ದಾರೆ.

ಭಾರತದಿಂದ ಕೇವಲ 2ರಿಂದ 3 ಸಾವಿರ ಕೋಟಿ ರೂ.ಗಳ ಸಿಹಿ ತಿನಿಸುಗಳು ಮಾತ್ರ ರಫ್ತಾಗುತ್ತಿದೆ. ಬ್ರಿಟನ್, ಕೆನಡಾ ಹಾಗೂ ನ್ಯೂಜಿಲ್ಯಾಂಡ್ ರೀತಿಯ ದೇಶಗಳಿಗೆ ಹಾಲು ಆಧರಿತ ಸಿಹಿ ರಫ್ತು ಮಾಡುವುದರ ಮೇಲೆ ಹಲವಾರು ನಿರ್ಬಂಧಗಳಿರುವುದೇ ರಫ್ತು ಕಡಿಮೆಯಾಗಲು ಕಾರಣ ಎಂದವರು ಹೇಳಿದ್ದಾರೆ.

ಸರ್ಕಾರ ದ್ವಿಪಕ್ಷೀಯ ಮಾತುಕತೆ ಮೂಲಕ ಈ ಅಡ್ಡಿಗಳನ್ನು ತೆರವುಗೊಳಿಸಬೇಕು. ಇದರಿಂದ ದೇಶೀಯ ಸಿಹಿ ಉತ್ಪಾದಕರಷ್ಟೇ ಅಲ್ಲದೇ ಹಾಲು ಉತ್ಪಾದಕರಿಗೂ ನೆರವಾಗುತ್ತದೆ ಎಂದು ನಕ್ವಿ ಅಭಿಪ್ರಾಯ ಪಟ್ಟಿದ್ದಾರೆ.

# ಮಳೆಹಾನಿ ಪ್ರದೇಶಗಳನ್ನು ವೀಕ್ಷಿಸಿದ ಶಾಸಕ ರಾಮಪ್ಪ



ಮಲೇಬೆನ್ನೂರು, ಸೆ. 3 - ಮಳೆಯಿಂದಾಗಿ ಯಲವಟ್ಟಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಕುಸಿದು ಬಿದ್ದಿರುವ ಮನೆಗಳನ್ನು ಹಾಗೂ ಮಳೆಹಾನಿ ಪ್ರದೇಶವನ್ನು ಶಾಸಕ ಎಸ್. ರಾಮಪ್ಪ ಅವರು ಶನಿವಾರ ವೀಕ್ಷಿಸಿ, ಸೂಕ್ತ ಪರಿಹಾರ ಕಲ್ಪಿಸುವ ಭರವಸೆ ನೀಡಿದರು. ಮುಖಂಡರಾದ ಕುಣಿಬೆಳಕೆರೆ ದೇವೇಂದ್ರಪ್ಪ ಶ್ರೀಮತಿ ಸವಿತಾ ನಾಯ್ಕ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು

# ರಸ್ತೆ ಅಪಘಾತ : ಸೈರಸ್ ಮಿಸ್ತ್ರಿ ಸಾವು

**(1ನೇ ಪುಟದಿಂದ)** ಸಾವನ್ನಪ್ಪಿದ್ದಾರೆ.

ಜಹಾಂಗೀರ್ ಅವರು ಟಾಟಾ ಸನ್ಸ್ ಸಮೂಹದ ಮಾಜಿ ಸ್ವತಂತ್ರ ನಿರ್ದೇಶಕ. ಅವರು ಸೈರಸ್ ಮಿಸ್ತ್ರಿಯನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸುವುದನ್ನು ವಿರೋಧಿಸಿದ್ದರು.

ಸೂರ್ಯ ನದಿ ಬಳಿಯ ಸೇತುವೆಯ ಮೇಲೆ ಅಪಘಾತ ಸಂಭವಿಸಿದೆ. ಮಿಸ್ತ್ರಿ ಹಾಗೂ ಜಹಾಂಗೀರ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಾಯಗೊಂಡ ಇಬ್ಬರನ್ನು ಗುಜರಾತ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪಾಲ್ಘಾರ್ ಜಿಲ್ಲಾ ಎಸ್‌ಪಿ ಬಾಳಾಸಾಹೇಬ್ ಪಾಟೀಲ್ ತಿಳಿಸಿದ್ದಾರೆ.

ಐರಿಶ್ ನಾಗರಿಕರಾಗಿರುವ ಮಿಸ್ತ್ರಿ, ಶಪೂರ್‌ಜಿ ಪಲ್ಲೊಂಜಿ ಸಮೂಹದ ಮುಖ್ಯಸ್ಥರಾಗಿದ್ದರು. ನಂತರ ಅವರನ್ನು ಟಾಟಾ ಸಮೂಹದ ಮುಖ್ಯಸ್ಥರಾಗಿ ನೇಮಿಸಲಾಗಿತ್ತು. ನಂತರ ಟಾಟಾ ಸನ್ಸ್ ಸಮೂಹದಿಂದ ಅವರನ್ನು ಹೊರ ಹಾಕಲಾಗಿತ್ತು. ಸೈರಸ್ ಅವರ ತಂದೆ ಪಲ್ಲೊಂಜಿ ಶಪೂರ್ಜಿ ಮಿಸ್ತ್ರಿ ಅವರು ಎರಡು ತಿಂಗಳ ಹಿಂದಷ್ಟೇ ಮೃತಪಟ್ಟಿದ್ದರು.

ಪ್ರಾಥಮಿಕ ಮಾಹಿತಿಗಳ ಪ್ರಕಾರ ಅನಾಹಿತಾ ಪಾಂಡೋಲೆ ಅವರು ಅತಿ ವೇಗವಾಗಿ ಮರ್ಸಿಡಿಸ್ ಬೆಂಜ್ ಕಾರು ಚಲಾಯಿಸುತ್ತಿದ್ದರು. ಅವರು ತಪ್ಪು ಮಾರ್ಗದ ಮೂಲಕ ಇನ್ನೊಂದು ವಾಹನ ಓವರ್‌ಟೇಕ್ ಮಾಡಲು ಪ್ರಯತ್ನ ನಡೆಸಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಆ ಸಂದರ್ಭದಲ್ಲಿ ನಿಯಂತ್ರಣ ತಪ್ಪಿದ ಕಾರು ಡಿವೈಡರ್‌ಗೆ ಬಡಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರತ್ಯಕ್ಷದರ್ಶಿಗಳೂ ಸಹ ಇದೇ ವಿಷಯ ತಿಳಿಸಿದ್ದಾರೆ. ಕಾರು ಅಪಘಾತಕ್ಕೀಡಾದಾಗ ಮಿಸ್ತ್ರಿ ಹಾಗೂ ಜಹಾಂಗೀರ್ ಹಿಂದಿನ ಸೀಟುಗಳಲ್ಲಿದ್ದರು.

# ಬಳಕೆ ಮಾಡಿದರೆ ದಂಡದ ಮೊತ್ತ ದ್ವಿಗುಣ

**(1ನೇ ಪುಟದಿಂದ)** ಬ್ಯಾಗ್, ಪ್ಲಾಸ್ಟಿಕ್ ಚಮಚ, ಪ್ಲಾಸ್ಟಿಕ್ ಪ್ಲೇಟ್, ಕ್ಲಿಂಗ್ ಫಿಲ್ಮ್ ಇತ್ಯಾದಿಗಳಿಂದ ಚರಂಡಿಗಳು, ಒಳಚರಂಡಿಗಳು ಬ್ಲಾಕ್ ಆಗಿ ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದಲ್ಲದೇ, ಸೊಳ್ಳೆಗಳ ಅಭಿವೃದ್ಧಿಗೆ ಕಾರಣವಾಗಿ ಡೆಂಗ್ಯೂ, ಚಿಕನ್‌ಗುನಿಯಾ, ಮಲೇರಿಯಾದಂತಹ ಅಪಾಯಕಾರಿ ರೋಗಗಳಿಗೂ ಕಾರಣವಾಗುತ್ತಿವೆ. ಇಂತಹ ಪ್ಲಾಸ್ಟಿಕ್ ವಸ್ತುಗಳು ಮರು ಬಳಕೆಗೂ ಸಾಧ್ಯವಾಗದೇ, ಸಹಸ್ರಾರು ವರ್ಷಗಳವರೆಗೆ ಕೊಳೆಯದೇ ಕಸ ನಿರ್ವಹಣೆಯಲ್ಲೂ ತೊಡಕುಂಟು ಮಾಡುವ ಮೂಲಕ ಪರಿಸರದ ಮೇಲೆ ಹೆಚ್ಚಿನ ದುಷ್ಪರಿಣಾಮ ಬೀರುತ್ತವೆ.

ಸಾರ್ವಜನಿಕರು ತಮ್ಮ ದೈನಂದಿನ ವ್ಯವಹಾರಗಳಿಗೆ ಪರಿಸರ ಸ್ನೇಹಿ ಬಟ್ಟೆ ಬ್ಯಾಗ್, ಜೂಟ್ ಬ್ಯಾಗ್‌ಗಳ ಬಳಕೆಯನ್ನು ರೂಢಿಸಿಕೊಳ್ಳುವ ಮೂಲಕ ನಮ್ಮ ಭವಿಷ್ಯದ ಪೀಳಿಗೆಗೆ ಉತ್ತಮ ಪರಿಸರ ನೀಡುವಲ್ಲಿ ಮಹಾನಗರ ಪಾಲಿಕೆಯೊಂದಿಗೆ ಕೈಜೋಡಿಸಬೇಕಾಗಿದೆ. ಇಲ್ಲವಾದಲ್ಲಿ ಮಹಾನಗರ ಪಾಲಿಕೆಯಿಂದ ದಂಡದ ಮೊತ್ತವನ್ನು ದ್ವಿಗುಣಗೊಳಿಸಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾಲ್ಮೀಕಿ ಅಭಿವೃದ್ಧಿ ನಿಗಮ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ದಾವಣಗೆರೆ,ಸೆ.4- ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ 2022-23ನೇ ಸಾಲಿನ ಪರಿಶಿಷ್ಟ ಪಂಗಡದ ಫಲಾನುಭವಿಗಳಿಂದ ವಿವಿಧ ಯೋಜನೆಗಳಿಗೆ ಸುವಿಧ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸರ್ಕಾರದ ಸೇವಾಸಿಂಧು https:// sevasindhuservices.karnataka.gov.in/ ಮೂಲಕ ಅರ್ಜಿ ಸಲ್ಲಿಸುವ ದಿನಾಂಕವನ್ನು ಇದೇ ದಿನಾಂಕ 15 ರವರೆಗೆ ವಿಸ್ತರಿಸಲಾಗಿದೆ.

ವಿವರಕ್ಕೆ ಕಚೇರಿ ದೂರವಾಣಿ ಸಂಖ್ಯೆ 08192-233309 ಗೆ ಸಂಪರ್ಕಿಸಬಹುದು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

# ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ಭವಾನಿ ಸ್ಪೆಷಾಲಿಟಿ ಕ್ಲಿನಿಕ್ ವತಿಯಿಂದ ಇಂದಿನಿಂದ ಇದೇ ದಿನಾಂಕ 15 ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ಸಂಪರ್ಕಿಸಿ : 9880491579.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 04-05-2022 ಭಾನುವಾರ ನಿಧನರಾದ ದಾವಣಗೆರೆ ಚಾಮರಾಜಪೇಟೆ ವಾಸಿ ದಿ|| ಗುಲಾಂ ರಸೂಲ್ ಸಾಬ್ ಬಾವಿಕಟ್ಟೆ ಇವರ ಹಿರಿಯ ಮಗನಾದ ದಾದಾ ಹಯಾತ್ ಪೋಹಾ ಇಂಡಸ್ಟ್ರಿಯ ಮಾಲೀಕರೂ ಮತ್ತು ಸಿಂಗ್ರಿಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರೂ ಆಗಿದ್ದ

**ಸಿಂಗ್ರಿಹಳ್ಳಿ ದಾದಾಪೀರ್ ಸಾಬ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಹೆಚ್. ಶಫಿ ಅಹಮದ್,** ಮಾಲೀಕರು
**ಅಲ್‌ಹಜ್ ಹೆಚ್.ಎಫ್. ಅಬ್ದುಲ್ ಗಫೂರ್ ಸಾಹೇಬ್ & ಸನ್ಸ್**
**ಡೆಕ್ಕನ್ ಕಿಂಗ್ ಪೋಹಾ ಇಂಡಸ್ಟ್ರೀಸ್,**
ಚಾಮರಾಜ ಪೇಟೆ, ದಾವಣಗೆರೆ.

## ಶ್ರೀಮತಿ ಶಿಲ್ಪಾ ನಿಧನ



ದಾವಣಗೆರೆ ವಿದ್ಯಾನಗರ ವಿನಾಯಕ ಬಡಾವಣೆ 2ನೇ ಮೇನ್, 2ನೇ ಕ್ರಾಸ್ (# 3438) ವಾಸಿ, ಹಿರಿಯ ತೆರಿಗೆ ಸಲಹೆಗಾರರಾದ ಶ್ರೀ ಟಿ. ಕೊಟ್ರೇಶ್ ಇವರ ಪುತ್ರ **ಶ್ರೀ ಟಿ.ಕೆ. ಗುರುಬಸವರಾಜ್** ಇವರ ಧರ್ಮಪತ್ನಿ **ಶ್ರೀಮತಿ ಶಿಲ್ಪಾ** ಅವರು ದಿನಾಂಕ 4-9-2022ರ ಭಾನುವಾರ ಬೆಳಿಗ್ಗೆ 7.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04-09-2022 ಭಾನುವಾರ ಸಂಜೆ 6.30 ಕ್ಕೆ ನಗರದ ಬೂದಾಳ್ ರಸ್ತೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ**
**ಟಿ. ಕೊಟ್ರೇಶ್ ಮತ್ತು ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರು.**

## ಭಾವಪೂರ್ಣ ಶ್ರದ್ಧಾಂಜಲಿ




ದಿನಾಂಕ 4.9.2022ರಂದು ನಿಧನರಾದ ನಮ್ಮ ನೆಚ್ಚಿನ ಶಿಕ್ಷಕರಾದ **ಶ್ರೀ ಬಲ್ಲೂರು ಪರಶುರಾಮ್ ಜರೇಕಟ್ಟೆ** ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

- ✦ **ಕಣ್ಣಾಳ ಅಂಜಿನಪ್ಪ,** ಜಿಲ್ಲಾ ಕಾಂಗ್ರೆಸ್ ಮುಖಂಡರು. ಶಾಮನೂರು.
- ✦ **ಬಿಸಲೇರಿ ಮೌನೇಶ್ವರ ಚಾರಿ** ಬಿಸಲೇರಿ, ಕಾಂಗ್ರೆಸ್ ಮುಖಂಡರು.
- ✦ **ನರಗನಹಳ್ಳಿ ರಮೇಶ್,** ಬಾಪೂಜಿ ವಿದ್ಯಾಸಂಸ್ಥೆ.
- ✦ **ಎಂ. ರಾಜಪ್ಪ,** ಜಿಲ್ಲಾ ಬಿಜೆಪಿ ಮುಖಂಡರು.
- ✦ **ಒ.ಹೆಚ್. ಅಂಜಿನಪ್ಪ,** ಕಾಂಗ್ರೆಸ್ ಮುಖಂಡರು, ಶಾಮನೂರು.

**ಹಳೇ ವಿದ್ಯಾರ್ಥಿಗಳ ಬಳಗ,** ಶಾಮನೂರು
**ಎಸ್.ಎಸ್. ಮಲ್ಲಿಕಾರ್ಜುನ ಅಭಿಮಾನಿ ಯುವ ಶಕ್ತಿ ಬಳಗ (ರಿ.)**
ಶಾಮನೂರು.

## ಪುಣ್ಯಸ್ಮರಣೆ



**ದಿ|| ಶ್ರೀ ಡಾ. ಎಸ್.ಸದಾಶಿವಪ್ಪ**
**ಸಂಸ್ಥಾಪಕರು ಅಶ್ವಿನಿ ನರ್ಸಿಂಗ್ ಹೋಂ**
ನಿಧನ : 5.9.2012

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷಗಳಾದವು.
ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ

**ಡಾ|| ಪ್ರಕಾಶ್ ಎಸ್.ಎಸ್., ಡಾ|| ಶರ್ಮಿಳಾ ಎಸ್.ಪಿ,**
**ಪ್ರಶಾಂತ್ ಎಸ್.ಎಸ್,**
**ಡಾ|| ಪ್ರವೀಣ್ ಎಸ್.ಎಸ್., ಡಾ|| ನೇತ್ರ ಎಸ್.ಎಸ್.**
**ಸುರಹೊನ್ನೆ ಕುಟುಂಬದವರು ಹಾಗೂ ಬಂಧು-ಮಿತ್ರರು.**

# ನಗರದಲ್ಲಿ ಇಂದಿನಿಂದ ಮೂರು ದಿನ ಭಾವೈಕ್ಯ ಜನಜಾಗೃತಿ ಧರ್ಮ ಸಮಾರಂಭ






ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರ ದ್ವಾದಶ ಪೀಠಾರೋಹಣ ಮಹೋತ್ಸವವು ಇಂದಿನಿಂದ ಮೂರು ದಿನಗಳ ಕಾಲ ನಗರದಲ್ಲಿ ನಡೆಯಲಿದೆ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಲಿಂ. ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಭಗತ್ಪಾದಂಗಳವರ 36ನೇ ವಾರ್ಷಿಕ ಪುಣ್ಯಾರಾಧನೆ ಮತ್ತು ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಲಿಂ. ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 11ನೇ ಸಂಸ್ಮರಣೋತ್ಸವವೂ ಏರ್ಪಾಡಾಗಿದೆ.

ಈ ಕಾರ್ಯಕ್ರಮದ ಅಂಗವಾಗಿ ಇಂದಿನಿಂದ ನಾಲ್ಕು ದಿನಗಳ ಕಾಲ ಪ್ರತಿದಿನ ಸಂಜೆ 6 ಗಂಟೆಗೆ ವಿನೋಬನಗರದ ಹರಿಹರ - ದಾವಣಗೆರೆ ಅರ್ಬನ್ ಸಹಕಾರ ಸಮುದಾಯ ಭವನ (ಕಲಾಪ್ರಕಾಶ ವೃಂದ) ದಲ್ಲಿ ಭಾವೈಕ್ಯ ಜಗಜಾಗೃತಿ ಧರ್ಮ ಸಮ್ಮೇಳನವನ್ನು ಆಯೋಜಿಸಲಾಗಿದೆ.

ಇಂದು ಬೆಳಿಗ್ಗೆ 8 ಗಂಟೆಗೆ ಶ್ರೀ ಶ್ರೀಶೈಲ ಮಠದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಧ್ವಜಾರೋಹಣವನ್ನು ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ ಅವರು ನೆರವೇರಿಸುವರು.

ನಂತರ ಸಂಜೆ 6 ಗಂಟೆಗೆ ಶ್ರೀಶೈಲ ಪೀಠದ ಜಗದ್ಗುರುಗಳ ದಿವ್ಯ ಸಾನ್ನಿಧ್ಯ ಮತ್ತು ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಜರುಗುವ ಭಾವೈಕ್ಯ ಜಗಜಾಗೃತಿ ಧರ್ಮ ಸಮ್ಮೇಳನವನ್ನು ಹಿರಿಯ ಶಾಸಕ ಎಸ್.ಎ. ರವೀಂದ್ರನಾಥ್ ಉದ್ಘಾಟಿಸುವರು. ಶಾಸಕ ಎಸ್.ವಿ. ರಾಮಚಂದ್ರ, ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್.ಶಿವಯೋಗಿಸ್ವಾಮಿ, ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, ಹಿರಿಯ ಲೆಕ್ಕ ಪರಿಶೋಧಕ ಅಥಣಿ ಎಸ್. ವೀರಣ್ಣ, ಹರಿಹರದ ಎಸ್.ಜೆ.ವಿ.ಪಿ. ಕಾಲೇಜಿನ ಉಪಾಧ್ಯಕ್ಷ ಡಿ.ಎಂ. ಹಾಲಸ್ವಾಮಿ, ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ, ಪಾಲಿಕೆ ಹಿರಿಯ ಸದಸ್ಯ ಎ.ನಾಗರಾಜ್ ಅವರುಗಳು ಮುಖ್ಯ ಅತಿಥಿಗಳಾಗಿದ್ದಾರೆ.

ಕಾರ್ಯಕ್ರಮದಲ್ಲಿ ಐಎಎಸ್ ಪದವಿ ಪುರಸ್ಕೃತರಾದ ಎಂ.ಎಸ್. ದಿವಾಕರ್ ಅವರನ್ನು ಗೌರವಿಸಲಾಗುತ್ತದೆ. ವೀರಶೈವ ಪರಂಪರೆ ಮತ್ತು ಪಂಚ ಪೀಠಗಳ ಕೊಡುಗೆ ವಿಷಯ ಕುರಿತು ಟಿ. ಶಿವಕುಮಾರಸ್ವಾಮಿ (ಬೆಂಗಳೂರು) ವಿಶೇಷ ಉಪನ್ಯಾಸ ನೀಡುವರು.

ನಾಳೆ ಮಂಗಳವಾರ ಸಂಜೆ 6 ಗಂಟೆಗೆ ನಡೆಯುವ ಜನ ಜಾಗೃತಿ ಧರ್ಮ ಸಮಾರಂಭವನ್ನು ಶ್ರೀಶೈಲ ಪೀಠದ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಲೋಕ ಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ಅವರು ಉದ್ಘಾಟಿಸುವರು. ರಾಮಘಟ್ಟ ಪುರವರ್ಗ ಮಠದ ಶ್ರೀ ರೇವಣಸಿದ್ಧ ಶಿವಾಚಾರ್ಯರು ಅಧ್ಯಕ್ಷತೆ ವಹಿಸುವರು.

ಶಾಸಕ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕರುಗಳಾದ ಹೆಚ್.ಎಸ್. ಶಿವಶಂಕರ್, ಬಿ.ಪಿ. ಹರೀಶ್, ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ್, ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ದೂಡಾ ಮಾಜಿ ಅಧ್ಯಕ್ಷ ದೇವರಮನೆ ಶಿವಕುಮಾರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ವೀರಶೈವ ಮಹಾಸಭಾ ಹರಿಹರ ತಾಲ್ಲೂಕು ಅಧ್ಯಕ್ಷ ಡಿ.ಬಿ. ಶಿವಾನಂದಪ್ಪ, ಬಿಜೆಪಿ ಮುಖಂಡ ಶ್ರೀನಿವಾಸ್ ದಾಸಕರಿಯಪ್ಪ ಅವರುಗಳನ್ನು ಸನ್ಮಾನಿಸಲಾಗುತ್ತದೆ.

ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಶ್ರೀ ವಾಗೀಶ ಪಂಡಿತಾರಾಧ್ಯರು ನೀಡಿದ ಕೊಡುಗೆ ಕುರಿತಂತೆ ಶ್ರೀಮತಿ ಜಯಶ್ರೀ ಹೊಸಮನಿ ಉಪನ್ಯಾಸ ನೀಡುವರು.

**ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯರ ದ್ವಾದಶ ಪೀಠಾರೋಹಣ ಮಹೋತ್ಸವ**

**ಶ್ರೀಶೈಲ ಪೀಠದ ಹಿರಿಯ ಜಗದ್ಗುರುಗಳಾದ ಲಿಂ. ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯರ 36ನೇ ಮತ್ತು ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯರ 11ನೇ ವರ್ಷದ ಸಂಸ್ಮರಣೋತ್ಸವ**

**ಮೂರು ದಿನ ಪ್ರತಿದಿನ ಸಂಜೆ 6 ಗಂಟೆಗೆ ಭಾವೈಕ್ಯ ಜನಜಾಗೃತಿ ಧರ್ಮ ಸಮ್ಮೇಳನ**

**ದಿನಾಂಕ 7ರ ಬುಧವಾರ ಶ್ರೀಶೈಲ 'ಲಿಂ. ಉಭಯ' ಜಗದ್ಗುರುಗಳವರ ಭಾವಚಿತ್ರ, ರಜತ ಮೂರ್ತಿಗಳ ಮೆರವಣಿಗೆ ಮತ್ತು ಕಾಶಿ ಪೀಠದ ಜಗದ್ಗುರುಗಳ ಪುರ ಪ್ರವೇಶ ದೊಂದಿಗೆ ಬೆಳ್ಳಿ ಅಡ್ಡ ಪಲ್ಲಕ್ಕಿ ಉತ್ಸವ**

**ದಿನಾಂಕ 8ರಂದು ಬೆಳಿಗ್ಗೆ 8 ಗಂಟೆಗೆ ಕಾಶಿ ಜಗದ್ಗುರುಗಳಿಂದ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ**

ದಿನಾಂಕ 7ರ ಬುಧವಾರ ಸಂಜೆ 6 ಗಂಟೆಗೆ ನಡೆಯಲಿರುವ ಧರ್ಮ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಸಿದ್ದಲಿಂಗ ರಾಜ ದೇಶೀಕೇಂದ್ರ ಶಿವಾಚಾರ್ಯರು, ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯರು, ಕಾಶಿ ಮಹಾಪೀಠದ ಜಗದ್ಗುರು, ಶ್ರೀ ಡಾ. ಮಲ್ಲಿಕಾರ್ಜುನ ವಿಶ್ವರಾಧ್ಯ ಶಿವಾಚಾರ್ಯರು ವಹಿಸುವರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಮುಖ್ಯ ಅತಿಥಿಯಾಗಿದ್ದು, ಪುಣ್ಯಾರಾಧನೆ ಸೇವಾ ಸಮಿತಿ ಕಾರ್ಯಾಧ್ಯಕ್ಷ ಎನ್.ಎ. ಮುರುಗೇಶ್ ಮುಖ್ಯ ಅತಿಥಿಗಳಾಗಿದ್ದಾರೆ.

ದಿನಾಂಕ 7ರ ಬುಧವಾರ ಉಭಯ ಜಗದ್ಗುರುಗಳಿಂದ ಶ್ರೀ ಜಗದ್ಗುರು ಪಂಚಾಚಾರ್ಯ ಮಂದಿರದ ದ್ವಾರ ಬಾಗಿಲು ಉದ್ಘಾಟನೆ ನಡೆಯಲಿದೆ. ನಂತರ ಶ್ರೀಶೈಲ 'ಲಿಂ. ಉಭಯ' ಜಗದ್ಗುರುಗಳವರ ಭಾವಚಿತ್ರ, ರಜತ ಮೂರ್ತಿಗಳ ಮೆರವಣಿಗೆ ಮತ್ತು ಕಾಶಿ ಪೀಠದ ಜಗದ್ಗುರು ಡಾ. ಚನ್ನಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರ ಪುರ ಪ್ರವೇಶದೊಂದಿಗೆ ಬೆಳ್ಳಿ ಅಡ್ಡ ಪಲ್ಲಕ್ಕಿ ಉತ್ಸವವು ರಾಜ ಬೀದಿಗಳಲ್ಲಿ ಜರುಗಲಿದೆ.

ದಿನಾಂಕ 8ರ ಗುರುವಾರ ಬೆಳಿಗ್ಗೆ 8 ಗಂಟೆಗೆ ಕಾಶಿ ಪೀಠದ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರಿಂದ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ ನೆರವೇರಲಿದೆ.

## ಗಣಪ ವಿಸರ್ಜನೆ

(1ನೇ ಪುಟದಿಂದ) ಕೊಂಡಜ್ಜಿ, ಕಿರಣ್ ಬೊಂಗಾಳೆ, ಮಂಜುನಾಥ್ ಆರನಹಳ್ಳಿ, ವಿಜಯ ರಟ್ಟಿಹಳ್ಳಿ, ಸಂತೋಷ ನೋಟ ದರ್, ಈ ಮಂಜುನಾಥ್, ಜೆ ಶಂಕರ್, ಮಂಜು, ಏಜಾಜ್ ಆಹ್ಮದ್, ದಾದಾಪೀರ್ ಭಾನು ವಳ್ಳಿ, ಸಿದ್ದಲಿಂಗಸ್ವಾಮಿ, ರವೀದ್ರ ಸಿಂಗ್, ಭೊಜರಾಜ್ ಹೋವಳೆ, ಎಂ. ಚಿದಾನಂದ ಕಂಚಿಕೇರಿ, ಅಂಜನ್ ಪ್ರಸಾದ್, ಲೋಕೇಶ್ ಮೂರ್ಕಲ್, ನಿರಂಜನ್, ನಾಗಮ್ಮ ಪಾರ್ವತಮ್ಮ ನೇತ್ರಾವತಿ ಪ್ಯಾಟಿ, ಲತಾ ಕೊಟ್ರೇಶ್, ಸವಿತಾ ನಾಯ್ಕ್, ವಿದ್ಯಾ, ನಾಗರತ್ನ, ಆನಂದ್ ಅಮವಾಸೆ, ವಿಜಯಕುಮಾರ್, ತಿಪ್ಪೇಶ್, ಮಲೇಬೆನ್ನೂರು ಗಂಗಾದರ್, ಅಭಿದಾಲಿ, ಭೋವಿ ಕುಮಾರ್, ರಮೇಶ್ ನಾಯ್ಕ್, ಮರಾಠ ಹರೀಶ್, ಭಾಗ್ಯಮ್ಮ ಚಿದಂಬರ ಜೋಯಿಸರು, ಹರಿಶಂಕರ್ ಜೋಯಿಸರು, ನಗರಸಭೆ ಸದಸ್ಯರು, ವಿವಿಧ ಮಹಿಳಾ ತಂಡದ ಸದಸ್ಯರು, ಇಲಾಖೆಯ ಅಧಿಕಾರಿಗಳು ಇತರರು ಹಾಜರಿದ್ದರು.

## ಎಸ್ಸೆಸ್ - ಎಸ್ಸೆಸ್ಸೆಂ ಅವರಿಗೆ ಸನ್ಮಾನ



ದಾವಣಗೆರೆ, ಸೆ.4- ನವಭಾರತ ವಿಘ್ನೇಶ್ವರ ಯುವಕರ ಸಂಘ, ಜಿಲ್ಲಾ ಕ್ರೀಡಾಪಟುಗಳ ಸಂಘ ಹಾಗೂ ಸ್ಟೇಡಿಯಂ ಫ್ರೆಂಡ್ಸ್ ಗ್ರೂಪ್ ವತಿಯಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಕ್ರಿಕೆಟ್ ಗಣಪತಿಯನ್ನು ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ವೀಕ್ಷಿಸಿದರು.

ಇದೇ ವೇಳೆ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಉದ್ಯಮಿ ಅಥಣಿ ವೀರಣ್ಣ, ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ವನಿತಾ ಸಮಾಜದ ಲತಿಕಾ ಶೆಟ್ಟಿ, ಸಂಘದ ಶಿವಗಂಗಾ ಶ್ರೀನಿವಾಸ್, ಹೆಚ್.ಮಹಾದೇವ್, ಕುರುಡಿ ಗಿರೀಶ್, ಜಯಪ್ರಕಾಶ್, ಶಿವಕುಮಾರ್, ರಂಗಸ್ವಾಮಿ, ದಿನೇಶ್, ಡಾ|| ಸುರೇಂದ್ರ, ಚಂದ್ರಶೇಖರ್, ವಾದಿರಾಜ್, ಮಂಜಣ್ಣ, ಸುಭಾಷ್, ಸಂದೇಶ್, ಸುರಭಿ ವಿನಯ್ ಪಾಟೀಲ್, ಹಾಲಸ್ವಾಮಿ, ರವಿ ಹಾಗೂ ಕ್ರೀಡಾಪಟುಗಳು ಉಪಸ್ಥಿತರಿದ್ದರು.

## ಪ್ರಕರಣದ ಸಿಬಿಐ ತನಿಖೆಗೆ ಒಡನಾಡಿ ಒತ್ತಾಯ

**(1ನೇ ಪುಟದಿಂದ)** ಹಲವಾರು ಬಾಲಕಿಯರು ಕಾಣೆಯಾಗಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳು ಬರುತ್ತಿವೆ. ಈ ಹಿನ್ನೆಲೆಯಲ್ಲಿ ಶರಣರ ವಿರುದ್ಧ ಉನ್ನತ ಹಂತದ ತನಿಖೆ ನಡೆಸಬೇಕು ಎಂದು ಒಡನಾಡಿ ಸಂಸ್ಥೆಯ ನಿರ್ದೇಶಕ ಸ್ಟ್ಯಾನ್ಲಿ ಕೆ. ವರ್ಗೀಸ್ ಒತ್ತಾಯಿಸಿದ್ದಾರೆ. ಕೆಲ ನಿಗೂಢ ಸಾವುಗಳ ಘಟನೆಗಳು ನಡೆದಿವೆ, ಕೆಲ ಬಾಲಕಿಯರು ಕಾಣೆಯಾಗಿದ್ದಾರೆ, ಅತ್ಯಾಚಾರದ ನಂತರ ಕೆಲವರ ಮದುವೆ ಮಾಡಲಾಗಿದೆ, ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಶರಣರಿಂದ ಪರಿಹಾರ ನೀಡಲಾಗಿದೆ ಎಂದೂ ಅವರು ಆರೋಪಿಸಿದ್ದಾರೆ. ಶರಣರ ಬಂಧನದಲ್ಲಿ ತಡವಾಗಿದೆ ಹಾಗೂ ಚಿತ್ರದುರ್ಗದ ಮಕ್ಕಳ ಕಲ್ಯಾಣ ಸಮಿತಿಯು ಈ ವಿಷಯದಲ್ಲಿ ಶಾಮೀಲಾಗಿದೆ. ವ್ಯವಸ್ಥಿತವಾಗಿ ಆರೋಪಿಗೆ ನೆರವು ನೀಡಲಾಗುತ್ತಿದೆ ಎಂದೂ ಅವರು ಆರೋಪಿಸಿದ್ದಾರೆ.

## ಸರ್ಕಾರಿ ಶಾಲೆ ಬಲಪಡಿಸಬೇಕಿದೆ: ಕುಂ.ವೀ



### ಹರಪನಹಳ್ಳಿ: 'ನಾನು ಕ್ವಾರಂಟೈನ್ ಆದದ್ದು' ಪುಸ್ತಕ ಬಿಡುಗಡೆ

ಹರಪನಹಳ್ಳಿ, ಸೆ.4- ವಿದ್ಯಾರ್ಥಿಗಳು ಹೆಚ್ಚು ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದರೆ ಖಾಸಗಿ ಶಾಲಾ-ಕಾಲೇಜುಗಳಿಗೆ ಭವಿಷ್ಯವಿಲ್ಲದಂತೆ ಮಾಡಬಹುದು ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಸಾಹಿತಿ ಕುಂ. ವೀರಭದ್ರಪ್ಪ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಸಾಹಿತಿ ಡಿ.ರಾಮನಮಲಿರವರ 'ನಾನು ಕ್ವಾರಂಟೈನ್ ಆದದ್ದು' ಪ್ರಬಂಧ ಸಂಕಲನ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು ಸರ್ಕಾರಿ ಶಾಲೆ, ಕಾಲೇಜುಗಳಲ್ಲಿ ಮಧ್ಯಮ, ಬಡ ಕೆಳವರ್ಗದ ಮಕ್ಕಳು ಅಭ್ಯಾಸ ಮಾಡುತ್ತಾರೆ. ಇಲ್ಲಿ ಯಾರು ಐಎಎಸ್, ಐಪಿಎಸ್ ಮಕ್ಕಳು ಇರುವುದಿಲ್ಲ. ಹಾಗಾಗಿ ಸರ್ಕಾರಿ ಶಾಲಾ-ಕಾಲೇಜುಗಳನ್ನು ಉತ್ತಮ ಪಡಿಸಬೇಕು ಎಂದು ಹೇಳಿದರು.

ಲೇಖಕರು ಬರೆದ ಪುಸ್ತಕಗಳನ್ನು ಪ್ರತಿಯೊಬ್ಬರು ಖರೀದಿಸಿ ಓದಿದಾಗ ಮಾತ್ರ ಪ್ರಕಟಿಸಿದ ಪುಸ್ತಕಗಳಿಗೆ ಬೆಲೆ ಸಿಕ್ಕಂತಾಗುತ್ತವೆ. ಓದುಗರು ಸ್ಥಳೀಯ ಸಾಹಿತಿಗಳಿಗೆ ಬೆಂಬಲಿಸಬೇಕು ಎಂದು ಸಲಹೆ ನೀಡಿದರು.

ಕನ್ನಡ ಸಾಹಿತ್ಯ ಎಂದರೆ ವಿವಿಧ ಕೊಂಬೆ, ರೆಂಬೆಗಳು, ಕಥೆ, ಕಾದಂಬರಿ, ಕಾವ್ಯಗಳನ್ನು ಒಳಗೊಂಡಿರುತ್ತದೆ. ಯಾವುದೇ ವಿಷಯ ಕುರಿತು ಪ್ರಬಂಧ ವನ್ನು ಬರೆಯಬಹುದು, ಆದರೆ ಆ ಪ್ರಬಂಧ ವಾಚಕರಿಗೆ ಸಂತಸ ತಂದುಕೊಡಬೇಕೆಂದು ತಿಳಿಸಿದರು.

ನಮ್ಮ ಕಣ್ಮುಂದೆ ನಡೆಯುವ ಘಟನೆಗಳ ಕುರಿತು ಅನೇಕ ಸಾಹಿತಿಗಳು ಪ್ರಬಂಧಗಳನ್ನು ಬರೆದಿದ್ದಾರೆ. ಅವುಗಳು ಖುಷಿ ಕೊಟ್ಟಿವೆ. ಯಾವ ಲೇಖಕ ನಾಚಿಕೆ ಸ್ವಭಾವ ಹೊಂದಿರುತ್ತಾರೆ ಅವರು ಸಾಹಿತಿಗಳಾಗಿರುತ್ತಾರೆ. ಸಾಹಿತಿ ಡಿ. ರಾಮನಮಲಿ ಬರೆದಿರುವ ಕ್ವಾರಂಟೈನ್ ಪದ ಅನೇಕ ಅರ್ಥಗಳನ್ನು ಕೊಡುತ್ತದೆ. ಅದು ಬಹಳ ಮಾರಣಾಂತಿಕವಾಗಿರುವ ರೋಗದ ಬಗ್ಗೆ ತಿಳಿಸುವ ಪದ ಕೊರೊನಾ ಸಂದರ್ಭದಲ್ಲಿ ಕ್ವಾರಂಟೈನ್‌ನಲ್ಲಿ ಹೋದರು ಎನ್ನುವ ಮಾತುಗಳನ್ನು ಕೇಳಿದ್ದು, ಅತ್ಯಂತ ಭೀಬತ್ಸಕಾರಿಯಾದ ಘಟನೆ ಜೀವನದಲ್ಲಿ ಮರೆಯಲಾಗದ್ದು ಎಂದು ಪುಸ್ತಕದ ಬಗ್ಗೆ ಬಣ್ಣಿಸಿದರು.

ಲೇಖಕರಾದವರು ಸಾಮಾಜಿಕ ವೈರುದ್ಯಗಳನ್ನು ಮತ್ತು ಸಮಕಾಲಿನ ತಲ್ಲಣಗಳನ್ನು ಅರ್ಥ ಮಾಡಿಕೊಳ್ಳದೆ ಇದ್ದರೆ, ಬಸವಣ್ಣನ ಅನುಯಾಯಿ ಒಬ್ಬ ಮಠಾಧೀಶ ಲೈಂಗಿಕವಾಗಿ ಮಕ್ಕಳನ್ನು ಶೋಷಣೆ ಮಾಡುತ್ತಾರೆ ಎಂದರೆ ಯೋಚಿಸಬೇಕಾಗಿದೆ. ನಾವು ಯಾವ ಸ್ಥಿತಿಯಲ್ಲಿದ್ದೇವೆ ಎಂದು ಕಳವಳ ವ್ಯಕ್ತಪಡಿಸಿದರು.

ದಯೆ ಇಲ್ಲದ ಧರ್ಮದ ಬದಲಾಗಿ ಭಯವಿಲ್ಲದ ಧರ್ಮ ಯಾವುದಯ್ಯ ಎನ್ನುವ ಹಾಗೆ ದೇಶದಲ್ಲಿ ಜಾತಿ, ಧರ್ಮದ ನಡುವೆ ಸಂಘರ್ಷ ಉಂಟಾಗಿ ಭಯದ ವಾತಾವರಣ ಆವರಿಸಿದೆ ಇಂತಹ ಸಂದರ್ಭದಲ್ಲಿ ಎಲ್ಲರೂ ಎಚ್ಚೆತ್ತುಕೊಳ್ಳಬೇಕಿದೆ. ಏನಾದರೂ ಮಾತನಾಡಿದರೆ ಪ್ರಕರಣ ದಾಖಲಾಗುತ್ತಿದೆ. ಸರ್ವಜನಾಂಗದ ಶಾಂತಿಯ ದೇಶ ಎಲ್ಲಿದೆ ಎಂದು ಪ್ರಶ್ನೆ ಮಾಡಿಕೊಳ್ಳಬೇಕಿದೆ ಎಂದರು.

ಇಂದು ಪತ್ಯದಲ್ಲಿ ಯಾವುದೋ ವ್ಯಕ್ತಿ ಅಂಡಮಾನ್ ಜೈಲಿನಿಂದ ಹಕ್ಕಿಯ ಮೇಲೆ ಹಾರಿಹೋಗುತ್ತಾರೆ ಎಂಬುದು ಸೇರಿಸಿದ್ದಾರೆ. ಆತನ ಹೆಸರು ಹೇಳಿದರೆ ಬೆದರಿಕೆ ಪತ್ರಗಳು ಬರುತ್ತಿವೆ. ಈಗಾಗಲೇ ನನಗೆ 7 ಬೆದರಿಕೆ ಪತ್ರಗಳು ಬಂದಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಲೇಖಕ ಡಿ.ರಾಮನಮಲಿ ಬೆಂಗಳೂರಿನ ನಂ.ರೇಡಿಯೋ ಮ್ಯಾನೇಜಿಂಗ್ ಡೈರೆಕ್ಟರ್ ಡಾ.ಗಿರಿಧರ ಹವಾಲ್ದಾರ್ ಹಾಗೂ ಅಮೇರಿಕ ಬ್ರಾಕ್‌ಪೋರ್ಟ್ ನ್ಯಾಯಾರ್ಕ್ ವಿವಿ ವಿಶ್ರಾಂತ ಕುಲಪತಿ ಡಾ.ಟಿ. ಮಹಾದೇವರಾವ್‌ರವರು ನಾನು ಕ್ವಾರಂಟೈನ್ ಆದದ್ದು, ಪುಸ್ತಕ ಕುರಿತು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜು ಪ್ರಾಂಶುಪಾಲ ಎನ್.ಎಂ. ನಾಗರಾಜ್ ವಹಿಸಿದ್ದರು. ನಿವೃತ್ತ ಇಸಿಓ ಇಸ್ಮಾಯಿಲ್ ಎಲಿಗಾರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಎಸ್. ರಾಜಾಭಕ್ಷಿ, ಎಸ್.ಖಾಸೀಂ ಸಾಬ್, ಬಸವರಾಜ ಸಂಗಪ್ಪನವರ್, ಹೇಮಪ್ಪ ಮೋರಿಗೇರಿ, ಉಪನ್ಯಾಸಕ ಹುಚ್ಚುರಾಯಪ್ಪ, ಸಾಹಿತಿಗಳಾದ ಮೇಟಿ ಕೊಟ್ರಪ್ಪ, ಹುರಕಡ್ಲಿ ಶಿವಕುಮಾರ್, ಪೂಜಾರ ಷಣ್ಮುಖಪ್ಪ, ಸಿ.ಗಂಗಾಧರ್ ಸೇರಿದಂತೆ ಇತರರು ಇದ್ದರು.

## ಶಿಕ್ಷಕರ ದಿನಾಚರಣೆ

ವರ್ತಮಾನದ
130 ವರ್ಷಗಳ
ಗುರುಗಳೆಲ್ಲರ
ಈ ಶಿಕ್ಷಕರ ದಿನಾಚರಣೆಯಾಗಿದೆ
ಈ ದಿನದ ಶಿಕ್ಷಕರೆಲ್ಲರಿಗೂ ಶುಭಾಶಯಗಳು....!!!

ಗುರು ಎನ್ನುವುದು
ಸರ್ವಪಲ್ಲಿ ರಾಧಾಕೃಷ್ಣನ್
ಎರಡನೇ ರಾಷ್ಟ್ರಪತಿಗಳು
ತಮ್ಮ ಹುಟ್ಟು ಹಬ್ಬ ಆಚರಿಸುವ ಬದಲು
ಈ ದಿನವೂ ಗುರು ಶಿಕ್ಷಕರ
ದಿನಾಚರಣೆಯಾಗಿದೆ....!!!

ಆದಿ ಪುರಾತನ
ಮೂಲ ಸಂಸ್ಕೃತಿಯ
ಗುರು ಪರಂಪರೆಯ
ಹರ ಮುನಿದರೆ
ಗುರು ಕಾಯುವ ಈ ನಾಣ್ಣುಡಿಯು....!!!

ಗುರು ಎನ್ನುವುದು
ಸರ್ವವ್ಯಾಪಿ ದೇವರನ್ನು
ಕಾಣಬೇಕಾದರೆ
ಪೂರ್ವತೆ ಕಾಲಸಂಹಿತವೂ
ಗುರುವಿನ ಅನುಮತಿಯು ಬೇಕೇ ಬೇಕು...!!!

ಗುರು ಎರಡಕ್ಷರಗಳು
ಕಳಿಸಿದಾತನೇ ಆ
ಮಹಾ ಭೋಧನೆಯ
ಭೌತಿಕ ಭೌದ್ಧಿಕ ವಿಕಾಸದ
ಗೌತಮ ಶ್ರೀ ಗುರು ಬುದ್ಧನಾದನು.....!!!

ಈ ರೀತಿ ಹಲವು ಸಾಧನೆಗಳ
ಗುರುಗಳು ತ್ರಿವಿಕ್ರಮರಂತೆ
ಸರ್ವಾಂಗೀಣ ಅವತಾರಗಳಲ್ಲಿ
ಶ್ರೀ ಗುರುಗಳ ಶಕ್ತಿಯು ವಿಶ್ವಕ್ಕೆ
ಆದಿ ಬುನಾದಿ ರಥಸ್ತೂಪಗಳಿದ್ದಂತೆ....!!!

ಗುರು ಬ್ರಹ್ಮ ಗುರು ವಿಷ್ಣು
ಗುರು ದೇವೋ ಮಹೇಶ್ವರ
ಗುರು ಸಾಕ್ಷಾತ್ ಪರ ಬ್ರಹ್ಮ
ತಸ್ಮೈಶ್ರೀ ಗುರುವೇ ನಮಃ

"ಗುರುವಿನ ಗುಲಾಮನಾಗದ ಹೊರತು
ದೊರಕದಯ್ಯ ಮುಕ್ತಿ "

**-ಸಂಗಮ್ ಟಿ.ಜಿ., ಕೊಟ್ಟೂರು**

## ದಕ್ಷಿಣ ಆಫ್ರಿಕಾದ ಕುಸ್ತಿ ಸ್ಪರ್ಧೆಗೆ ಕೆ. ಗುರುಶಾಂತಪ್ಪ ಆಯ್ಕೆ



ದಾವಣಗೆರೆ, ಸೆ. 4- ಕೇರಳದ ಮಾಸ್ಟರ್ಸ್ ಗೇಮ್ಸ್ ಫೆಡರೇಷನ್ (ಇಂಡಿಯಾದ)ದ 4ನೇ ನ್ಯಾಷನಲ್ ಮಾಸ್ಟರ್ಸ್ ಗೇಮ್ಸ್ - 2022ರ ವತಿಯಿಂದ 2023ರ ಜೂನ್ ತಿಂಗಳಲ್ಲಿ ನಡೆಯಲಿರುವ 4ನೇ ನ್ಯಾಷನಲ್ ಮಾಸ್ಟರ್ಸ್ ಗೇಮ್ಸ್ 2023ರ ಕುಸ್ತಿಯಲ್ಲಿ ನಗರದ ಅಂತರರಾಷ್ಟ್ರೀಯ ಕ್ರೀಡಾಪಟು ಕೆ. ಗುರುಶಾಂತಪ್ಪ ಅವರು 75 ವರ್ಷ ಮೇಲ್ಪಟ್ಟ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದಾರೆ. ಗುರುಶಾಂತಪ್ಪ ಅವರು, ಕೇರಳದ ತಿರುವನಂತಪುರಂನಲ್ಲಿ ಏರ್ಪಡಿಸಲಾಗಿದ್ದ 4ನೇ ನ್ಯಾಷನಲ್ ಮಾಸ್ಟರ್ಸ್ ಗೇಮ್ಸ್ -2022ರ 75ವರ್ಷ ವಯಸ್ಸಿನ ಮೇಲ್ಪಟ್ಟ ಪಂದ್ಯಗಳಾದ ಕುಸ್ತಿಯಲ್ಲಿ ಪ್ರಥಮ, ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ತೃತೀಯ, ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಹಾಗೂ ತ್ರಿಬಲ್ ಜಂಪ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

## ಪುಣ್ಯದ ಕೆಲಸ ಮಾಡಲು ಗುರು ಹಿರಿಯರ ಆಶೀರ್ವಾದ ಅವಶ್ಯ

### ರಾಣೇಬೆನ್ನೂರಿನಲ್ಲಿ ಶಾಸಕ ಅರುಣಕುಮಾರ್



ರಾಣೇಬೆನ್ನೂರು, ಸೆ. 4 - ಇಲ್ಲಿನ ವಾಗೀಶ ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಮಂಗಳವಾರ ಏರ್ಪಡಿಸಲಾಗಿದ್ದ ಶ್ರೀ ವೀರಭದ್ರೇಶ್ವರ ಜಯಂತ್ಯೋತ್ಸವ ಸಮಾರಂಭ ಹಾಗೂ ತಮ್ಮ ಸ್ವಂತ ಹಣದಲ್ಲಿ ನಿರ್ಮಿಸಿದ ದೇವಸ್ಥಾನದ ಮೇಲ್ಛಾವಣಿ ಉದ್ಘಾಟಿಸಿ ಶಾಸಕ ಅರುಣ ಕುಮಾರ ಪೂಜಾರ ಮಾತನಾಡಿದರು.

ರಾಜ್ಯದಲ್ಲಿ ನೆರೆ ಹಾವಳಿಯಿಂದ ಜನರು ಸಂಕಷ್ಟದಲ್ಲಿದ್ದಾರೆ. ಆದರೆ ಸ್ಥಳೀಯ ಜನತೆಯಲ್ಲಿರುವ ದೈವಭಕ್ತಿ ಯಿಂದಾಗಿ ತಾಲ್ಲೂಕಿನಲ್ಲಿ ಹೆಚ್ಚಿನ ಅನಾ ಹುತ ಸಂಭವಿಸಿಲ್ಲ. ಮನುಷ್ಯನಿಗೆ ಅಧಿಕಾರ ಶಾಶ್ವತವಲ್ಲ, ಮಾಡಿದ ಕೆಲಸಗಳು, ಜನರ ಪ್ರೀತಿ, ವಿಶ್ವಾಸ ಮುಖ್ಯ ಎಂದರು.

ಸಾನ್ನಿಧ್ಯ ವಹಿಸಿದ್ದ ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯರು ಮಾತನಾಡಿ, ಪ್ರಗತಿಪರ ಚಿಂತಕರಿಗೆ ಪ್ರೋತ್ಸಾಹ ನೀಡಬೇಕು. ಉಪಕಾರ ಮಾಡಿದವರನ್ನು ಸದಾ ಸ್ಮರಿಸಿ ಬೆಂಬಲಿಸ ಬೇಕು. ಧರ್ಮದ ರಕ್ಷಣೆ ಮಾಡಿದವರನ್ನು ಧರ್ಮ ಕಾಪಾಡುತ್ತದೆ. ಪ್ರತಿಯೊಬ್ಬರೂ ಸ್ವಾಭಿಮಾನದ ಗುಣ ಬೆಳೆಸಿಕೊಳ್ಳಬೇಕು ಎಂದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ ನರಸಗೊಂಡರ, ನಗರಸಭಾ ಸದಸ್ಯರುಗಳಾದ ನಾಗರಾಜ ಪವಾರ, ಮಲ್ಲಿಕಾರ್ಜುನ ಅಂಗಡಿ, ಪ್ರಕಾಶ ಪೂಜಾರ, ದೇವಸ್ಥಾನ ಸಮಿತಿ ಮಾಜಿ ಅಧ್ಯಕ್ಷ ಬಸವರಾಜಪ್ಪ ಪಟ್ಟಣಶೆಟ್ಟಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ದೇವಸ್ಥಾನ ಸಮಿತಿ ಅಧ್ಯಕ್ಷ ವೀರೇಶ (ರಾಜಣ್ಣ) ಮೋಟಗಿ ಅಧ್ಯಕ್ಷತೆ ವಹಿಸಿದ್ದರು.

ವೀರಭದ್ರೇಶ್ವರ ಜಯಂತ್ಯೋತ್ಸವ ಕುರಿತು ಬಿಎಜೆಎಸ್‌ಎಸ್ ಬಿಇಡಿ ಕಾಲೇಜಿನ ಪ್ರಾಚಾರ್ಯ ಡಾ. ಮೃತ್ಯುಂಜಯ ಎಂ.ಎಂ. ಉಪನ್ಯಾಸ ನೀಡಿದರು.

ಉದಯಕುಮಾರ ಪುರಾಣಿಕ ಮಠ, ಜಿ.ಜಿ. ಹೊಟ್ಟಿಗೌಡ್ರ, ವಿನೋದ ಜಂಬಗಿ, ಬಾಬಣ್ಣ ಶೆಟ್ಟರ್, ಕಸ್ತೂರಿ ಪಾಟೀಲ, ಕೆ. ಆರ್.ರಾಮಲಿಂಗಣ್ಣನವರ, ಭಾರತಿ ಅಳವಂಡಿ ಮತ್ತಿತರರಿದ್ದರು.

ಇದಕ್ಕೂ ಪೂರ್ವದಲ್ಲಿ ಬೆಳಗ್ಗೆ 8.30ಕ್ಕೆ ನಗರದ ಮೆಡ್ಲೇರಿ ಕ್ರಾಸ್‌ನ ಶ್ರೀ ಮಲ್ಲಿಕಾರ್ಜುನ (ಈಶ್ವರ) ದೇವಸ್ಥಾನದ ಬಳಿ ವೀರಭದ್ರೇಶ್ವರ ಮೂರ್ತಿಯ ಮೆರವಣಿಗೆಗೆ ನಗರಸಭೆ ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ, ಉಪಾಧ್ಯಕ್ಷೆ ಪ್ರಭಾವತಿ ತಿಳವಳ್ಳಿ ಚಾಲನೆ ನೀಡಿದರು.

## ನಗರದಲ್ಲಿಂದು ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮ್ಮೇಳನ

ಭಾರತ ಕಮ್ಯುನಿಸ್ಟ್ ಪಕ್ಷದ ದಾವಣಗೆರೆ ಜಿಲ್ಲಾ ಸಮ್ಮೇಳನವು ಇಂದು ನಡೆಯಲಿದೆ ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ತಿಳಿಸಿದ್ದಾರೆ.

ಬೆಳಿಗ್ಗೆ 11 ಗಂಟೆಗೆ ಕಾಂ. ಪಂಪಾಪತಿ ಭವನದಲ್ಲಿ ಆರಂಭವಾಗುವ ಸಮ್ಮೇಳನದ ಉದ್ಘಾಟನೆಯನ್ನು ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯರಾದ ಪಿ.ವಿ. ಲೋಕೇಶ್ ನೆರವೇರಿಸುವರು. ಪಕ್ಷದ ಹಿರಿಯ ಮುಖಂಡ ಹೆಚ್.ಕೆ. ಕೊಟ್ರಪ್ಪ ಧ್ವಜಾರೋಹಣ ಮಾಡುವರು. ಸಮ್ಮೇಳನದ ಅಧ್ಯಕ್ಷತೆಯನ್ನು ಪಕ್ಷದ ಹಿರಿಯ ನಾಯಕರು ಹಾಗೂ ಸಿಪಿಐ ಜಿಲ್ಲಾ ಮಂಡಳಿ ಖಜಾಂಚಿ ಆನಂದ ರಾಜ್ ವಹಿಸುವರು. ವೇದಿಕೆಯಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು, ಸಹ ಕಾರ್ಯ ದರ್ಶಿಗಳಾದ ಹೆಚ್.ಜಿ. ಉಮೇಶ್, ಆವರಗೆರೆ ವಾಸು, ಪಕ್ಷದ ಮುಖಂಡರುಗಳಾದ ಟಿ. ಎಸ್. ನಾಗರಾಜ್, ಎಂ.ಬಿ. ಶಾರದಮ್ಮ, ಕೆ.ಜಿ. ಶಿವಮೂರ್ತಿ ಇರುವರು.

## ದೇವಾಲಯಕ್ಕಿಂತ ಶಾಲೆ ನಿರ್ಮಾಣವೇ ಶ್ರೇಷ್ಠ

### ಸಂಸದ ಸಿದ್ದೇಶ್ವರ



ದಾವಣಗೆರೆ, ಸೆ.4- ಹತ್ತಾರು ದೇವಾಲಯ ನಿರ್ಮಾಣಕ್ಕಿಂತ ಶಾಲೆ ನಿರ್ಮಿಸುವುದೇ ಶ್ರೇಷ್ಠ ಎಂದು ಸಂಸತ್ ಸದಸ್ಯ ಜಿ.ಎಂ. ಸಿದ್ದೇಶ್ವರ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಈಚಘಟ್ಟದಲ್ಲಿ ಶನಿವಾರ ನಡೆದ ಪ್ರೌಢಶಾಲಾ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಲ್ಲಿಯೇ ಶಿಕ್ಷಣ ಕೊಡಿಸಲು ಮುಂದಾಗಬೇಕು. ಖಾಸಗಿ ಶಾಲೆಗಿಂತ ಸರ್ಕಾರಿ ಶಾಲೆಗಳಲ್ಲಿಯೇ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ. ಜನ ಪ್ರತಿನಿಧಿಗಳ ಮೇಲೆ ಒತ್ತಡ ಹಾಕಿ ಶಾಲೆ ನಿರ್ಮಿಸಿಕೊಂಡರೆ ಸಾಲದು, ಹಾಜರಾತಿಯೂ ಹೆಚ್ಚಿಸುವಂತೆ ನೋಡಿಕೊಳ್ಳಬೇಕು. ಶಾಲೆಗಳು ದೇವಾಲಯಗಳಿಗಿಂತ ಪವಿತ್ರವಾದವು, ಅವುಗಳ ಅಭಿವೃದ್ಧಿಗೆ ನಾಗರಿಕರು ಶ್ರಮಿಸಬೇಕು ಎಂದರು.

ಶಾಸಕ ಎಂ. ಲಿಂಗಣ್ಣ ಮಾತನಾಡಿ, ಈಚಘಟ್ಟಕ್ಕೆ ಪ್ರೌಢ ಶಾಲೆ ಕಟ್ಟಡ ಮಂಜೂರು ಮಾಡಿಸುವಲ್ಲಿ ಸಂಸದರೂ ಹೆಚ್ಚು ಶ್ರಮವಹಿಸಿದ್ದಾರೆ. ಗ್ರಾಮಸ್ಥರು ಶಾಲೆಯಲ್ಲಿ ಉತ್ತಮ ವಾತಾವರಣ ನಿರ್ಮಾಣ ಮಾಡಬೇಕು. ಖಾಸಗಿ ಶಾಲೆ, ಇಂಗ್ಲಿಷ್ ಮಾಧ್ಯಮದ ಗೀಳನ್ನು ಪೋಷಕರು ಕೈಬಿಡಬೇಕು. ಕ್ಷೇತ್ರದಲ್ಲಿ ಶಾಲಾ ಕಟ್ಟಡ ಅಗತ್ಯಬಿದ್ದಲ್ಲಿ ಮಂಜೂರಾತಿಗೆ ಚರ್ಚಿಸುವುದಾಗಿ ತಿಳಿದರು.

ಬಯಲು ಸೀಮೆ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಅಣಬೇರು ಜೀವನ ಮೂರ್ತಿ, ಇಲ್ಲಿ ವ್ಯಾಸಂಗ ಮಾಡಿದವರು ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ದಿಶಾ ಸಮಿತಿ ಸದಸ್ಯ ಸಂಗಣ್ಣ ಗಂಗನಕಟ್ಟೆ, ಗ್ರಾಮ ಪಂಚಾಯತಿ ಅಧ್ಯಕ್ಷರಾದ ಸುಮಂಗಳ ಮಲ್ಲಿಕಾರ್ಜುನ, ಉಪಾಧ್ಯಕ್ಷ ಸುರೇಶ್ ಮತ್ತು ಸದಸ್ಯರು, ಬಿಜೆಪಿ ಮಂಡಲ ಅಧ್ಯಕ್ಷ ಶ್ಯಾಗಲೆ ದೇವೇಂದ್ರಪ್ಪ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಮುಖಂಡ ಐಗೂರು ರವಿ ಮತ್ತು ಗ್ರಾಮಸ್ಥರು ಹಾಜರಿದ್ದರು.

## ಹದಡಿಯಲ್ಲಿ ಇಂದು ಸಭೆ

ಹದಡಿಯ ಕನಕ ವಿವಿಧೋದ್ದೇಶ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಇಂದು ಮಧ್ಯಾಹ್ನ 12 ಗಂಟೆಗೆ ಹದಡಿಯ ಸಂಘದ ಆವರಣದಲ್ಲಿ ಅಧ್ಯಕ್ಷ ಎ.ಹೆಚ್.ನಾಗರಾಜ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಕಾರ್ಯದರ್ಶಿ ಎಲ್.ಯೋಗೀಶ್ ತಿಳಿಸಿದ್ದಾರೆ.


**ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ 2ನೇ ನ್ಯಾಯಾಲಯ, ದಾವಣಗೆರೆ.**

ಸಿ.ಆರ್.ಮಿಸ್.ನಂ. 551/2022

**ಅರ್ಜಿದಾರರು :** ಶ್ರೀಮತಿ ಸುನಿತಾಬಾಯಿ ಕೋಂ. ಶಿವಾನಾಯ್ಕ, ವಯಸ್ಸು : ಸುಮಾರು 37 ವರ್ಷ, ಗೃಹಿಣಿ, ವಾಸ :# ಅರಸಾಪುರ ಗ್ರಾಮ, ಕಡ್ಲೇಬಾಳು ಪೋಸ್ಟ್, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.

ವಿರುದ್ಧ

**ಎದುರುದಾರರು :** ಜನನ ಮರಣ ನೋಂದಾಣಿಧಿಕಾರಿಗಳು, ಜನನ ಮರಣ ನೋಂದಣಾಧಿಕಾರಿಗಳವರ ಕಛೇರಿ, ಮಹಾನಗರ ಪಾಲಿಕೆ, ದಾವಣಗೆರೆ.

**ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟಿಸು**

ಅರ್ಜಿದಾರರ ಗಂಡನಾದ ಶಿವನಾಯ್ಕ ತಂದೆ ರಾಮಾನಾಯ್ಕ ಇವರು ದಿನಾಂಕ : 13.08.2012ರಂದು ಮರಣ ಹೊಂದಿರುತ್ತಾರೆ. ಅರ್ಜಿದಾರನು ಮೇಲ್ಕಂಡ ಪ್ರಕರಣವನ್ನು ತಮ್ಮ ಗಂಡನ ಮರಣ ಪ್ರಮಾಣ ಪತ್ರವನ್ನು ಪಡೆಯಲು ಮಾನ್ಯ ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರದಾದರೂ ತಕರಾರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ :10.10.2022ರಂದು ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿಯಾಗಲೀ, ನಿಮ್ಮ ವಕೀಲರ ಮುಖಾಂತರವಾಗಲೀ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 26.8.2022 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
(ಎಂ.ಕುಮಾರನಾಯ್ಕ)
ವಕೀಲರು

ನ್ಯಾಯಾಲಯದ ಆದೇಶದ ಮೇರೆಗೆ
**ಶಿರಸ್ತೇದಾರರು**
ಪ್ರಥಮದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
1ನೇ ನ್ಯಾಯಾಲಯ, ದಾವಣಗೆರೆ.



**ಸಾರ್ವಜನಿಕ ಪ್ರಕಟಣೆ**

ನಮ್ಮ ಕಕ್ಷಿದಾರರಾದ ಕೆ.ಕರೇ ಹನುಮಪ್ಪ ಬಿನ್ ಕಾಡಪ್ಪ #1776/ಎ-94 ಎನ್‌ಸಿಸಿ ಆಫೀಸ್ ಎದುರು, ಎಸ್.ಎಸ್. ಬಡಾವಣೆ, ದಾವಣಗೆರೆ ಸಿಟಿ ಇವರುಗಳು ಕೊಟ್ಟ ಅಧಿಕಾರ ಮತ್ತು ಮಾಹಿತಿ ಮೇರೆಗೆ ಈ ಮೂಲಕ ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ,

ನಮ್ಮ ಕಕ್ಷಿದಾರರು ನೀಡಿದ ಅಧಿಕಾರ ಮತ್ತು ಮಾಹಿತಿ ಮೇರೆಗೆ ದಿನಾಂಕ : **4.9.2022ರಂದು ಜನತಾವಾಣಿ ಪತ್ರಿಕೆಯಲ್ಲಿ** ಈ ನೋಟಿಸಿನ ಅನುಸೂಚಿ ಆಸ್ತಿಗೆ ಸಂಬಂಧಪಟ್ಟಂತೆ ಸಾರ್ವಜನಿಕ ಪ್ರಕಟಣೆಯನ್ನು ನೀಡಿರುತ್ತದೆ.

ಸದರಿ ಪ್ರಕಟಣೆಯಲ್ಲಿ ನಮೂದಿಸಿರುವ ಶಾಮನೂರು ಗ್ರಾಮದ ವಾಸಿ ಕಣ್ಣಾಳು ಅಂಜಿನಪ್ಪ ಬಿನ್ ಬಸವರಾಜಪ್ಪ ಮತ್ತು ನಮ್ಮ ಕಕ್ಷಿದಾರರ **ಮಧ್ಯೆ ರಾಜೀ ಸಂಧಾನವಾಗಿರುತ್ತದೆ.** ಸದರಿ ಆಸ್ತಿಯನ್ನು ನಮ್ಮ ಕಕ್ಷಿದಾರರು ಮಾರಾಟ ಮಾಡಲು ಯಾರದೂ, ಯಾವುದೇ ರೀತಿ ತಂಟೆ-ತಕರಾರು ಇರುವುದಿಲ್ಲ ಅಂತ **ರಾಜೀ ಒಪ್ಪಂದವಾಗಿದೆ** ಅಂತ ನೀಡಿದ ಸಾರ್ವಜನಿಕ ಪ್ರಕಟಣೆ.

**ಷೆಡ್ಯೂಲ್**

ದಾವಣಗೆರೆ ಮಹಾನಗರ ಪಾಲಿಕೆ, #1776/ಎ-94, ಅಳತೆ 30x50 ಅಡಿವುಳ್ಳ ಪೂರಾ ಮನೆ ಮತ್ತು ಖಾಲಿ ಜಾಗ. ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ಸೈಟ್ ನಂ.93, ಪಶ್ಚಿಮಕ್ಕೆ : ಸೈಟ್ ನಂ. 95, ಉತ್ತರಕ್ಕೆ : ಸೈಟ್ ನಂ.79ರಲ್ಲಿ ಬಿಲ್ಡಿಂಗ್, ದಕ್ಷಿಣಕ್ಕೆ : 30 ಫೀಟ್ ರೋಡ್.

ಸ್ಥಳ : ದಾವಣಗೆರೆ
ದಿನಾಂಕ : 4.9.2022

ಇಶ್ರತ್‌ಬಾನು
ವೀಣಾ ಎಸ್.ಎನ್,
ವಕೀಲರು
ಮೊ : 63631 75269, 81838 47137

## ಹಿಂದೂ ಮಹಾಗಣಪತಿಗೆ ಸಿ.ಟಿ.ರವಿ ಪೂಜೆ



ದಾವಣಗೆರೆ, ಸೆ.4- ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಚಿಕ್ಕಮಂಗಳೂರು ಶಾಸಕ ಸಿ.ಟಿ. ರವಿ ಅವರು ಹಿಂದೂ ಮಹಾ ಗಣಪತಿ ಟ್ರಸ್ಟ್ ವತಿಯಿಂದ ಪ್ರತಿಷ್ಠಾಪಿಸಲಾಗಿರುವ ಗಣೇಶ ಮೂರ್ತಿಯ ದರ್ಶನವನ್ನು ನಿನ್ನೆ ಪಡೆದರು. ಈ ಸಂದರ್ಭದಲ್ಲಿ ಹಿಂದೂ ಮಹಾ ಗಣಪತಿ ಟ್ರಸ್ಟ್ ಅಧ್ಯಕ್ಷ ಜೊಳ್ಳಿ ಗುರು, ಚಿಕ್ಕಿ ಮಂಜು ಮತ್ತು ಟ್ರಸ್ಟ್ ನ ಪದಾಧಿಕಾರಿಗಳು ಇದ್ದರು.

## ಗಣೇಶನ ಮೂರ್ತಿಗೆ ನವಿಲಿನ ನಮನ



ದಾವಣಗೆರೆ, ಸೆ.4- ಎರೇಬೂದಿಹಾಳ್ ಸಮೀಪದ ನೆಹರೂ ಕ್ಯಾಂಪ್‌ನಲ್ಲಿ ವಿನಾಯಕ ಗೆಳೆಯರ ಸಂಘದಿಂದ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು. ಗಣೇಶನ ಅಣ್ಣ ಕುಮಾರ ಸ್ವಾಮಿ ವಾಹನ ನವಿಲು ಗಣೇಶನ ಮುಂದೆ ಒಂದು ಗಂಟೆಗೂ ಹೆಚ್ಚು ಕಾಲ ನಿಂತು ವಿನಾಯಕನನ್ನು ನಮಿಸಿದ್ದು ವಿಶೇಷ. ಇಂದು ಗಣೇಶನನ್ನು ವಿಸರ್ಜನೆ ಮಾಡಲಾಯಿತು. ಈ ಪ್ರಯುಕ್ತ ಅನ್ನ ಸಂತರ್ಪಣೆ ನಡೆಯಿತು.

## ನಗರದಲ್ಲಿ ಇಂದು ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮದಿನಾಚರಣೆ ಹಾಗೂ ಶಿಕ್ಷಕರ ದಿನಾಚರಣೆ ಅಂಗವಾಗಿ ನೀಡಲಾಗುವ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಸಮಾರಂಭವು ಇಂದು ಬೆಳಿಗ್ಗೆ 10.30 ಗಂಟೆಗೆ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಉದ್ಘಾಟಿಸುವರು. ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸುವರು. ಜಿ.ಎಂ. ಸಿದ್ದೇಶ್ವರ ಅವರು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಮತ್ತು ಮಾತೆ ಸಾವಿತ್ರಿಬಾಯಿ ಪುಲೆ ಅವರುಗಳ ಭಾವಚಿತ್ರಗಳ ಅನಾವರಣ ಮಾಡುವರು. ಎಂ.ಪಿ. ರೇಣುಕಾಚಾರ್ಯ, ಶಾಮನೂರು ಶಿವಶಂಕರಪ್ಪ ಮತ್ತು ಇತರರು ಉಪಸ್ಥಿತರಿರುವರು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಜಿ.ಆರ್.ತಿಪ್ಪೇಶಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನರ್ಸಿಂಗ್ ವಿದ್ಯಾರ್ಥಿಗಳ ವಾರ್ಷಿಕ ಕ್ರೀಡಾಕೂಟ ಉದ್ಘಾಟನೆ ಇಂದು

ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್ ಮತ್ತು ಬಾಪೂಜಿ ಸ್ಕೂಲ್ ಆಫ್ ನರ್ಸಿಂಗ್ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಎಸ್‌ಎಸ್ ಐಎಂಎಸ್ ಅಂಡ್ ಆರ್‌ಸಿ ಕ್ರೀಡಾ ಮೈದಾನದಲ್ಲಿ ವಾರ್ಷಿಕ ಕ್ರೀಡಾಕೂಟದ ಉದ್ಘಾಟನಾ ಸಮಾರಂಭ ನಡೆಯಲಿದೆ.

ಅಧ್ಯಕ್ಷತೆಯನ್ನು ಬಾಪೂಜಿ ಕಾಲೇಜ್ ಆಫ್ ನರ್ಸಿಂಗ್ ಪ್ರಾಂಶುಪಾಲರಾದ ಪ್ರೊ. ಎಸ್.ಎಫ್. ಬಿಲ್ಲಳ್ಳಿ, ಬಾಪೂಜಿ ಸ್ಕೂಲ್ ಆಫ್ ನರ್ಸಿಂಗ್ ಪ್ರಾಂಶುಪಾಲರಾದ ಕೆ.ಎಂ. ಹರ್ಷ ವಹಿಸಿಕೊಳ್ಳಲಿ ದ್ದಾರೆ. ಮುಖ್ಯ ಅತಿಥಿಗಳಾಗಿ ಎಸ್‌ಎಸ್‌ಐಎಂಎಸ್ ಅಂಡ್ ಆರ್‌ಸಿ ಪ್ರಾಚಾರ್ಯ ಡಾ.ಬಿ.ಎಸ್. ಪ್ರಸಾದ್, ಬಾಪೂಜಿ ಆಸ್ಪತ್ರೆ ನರ್ಸಿಂಗ್ ಸೂಪರಿಂಟೆಂಡೆಂಟ್ ಪಿ.ಎ. ಮೇರಿ ಆಗಮಿಸಲಿದ್ದಾರೆ.


## ಉದ್ಯಮಶೀಲತಾಭಿವೃದ್ಧಿ ತರಬೇತಿ ಶಿಬಿರ

ದಾವಣಗೆರೆ, ಸೆ. 4 - ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಹಾಗೂ ಜೀವನೋಪಾಯ ಇಲಾಖೆ ಪ್ರಾಯೋಜಕತ್ವದಲ್ಲಿ ಸಿಡಾಕ್ ಸಂಸ್ಥೆಯಿಂದ ಸ್ವಯಂ ಉದ್ಯೋಗ ಕೈಗೊಳ್ಳಲು ಇಚ್ಛಿಸುವ ಜಿಲ್ಲೆಯ ಆಸಕ್ತ ಮಹಿಳಾ ಉದ್ಯಮಾಕಾಂಕ್ಷಿಗಳಿಗೆ ವಸತಿ ರಹಿತ 10 ದಿನಗಳ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಬಾಪೂಜಿ ಪಾಲಿಟೆಕ್ನಿಕ್‌ನಲ್ಲಿ ಇದೇ ದಿನಾಂಕ 12 ರಿಂದ 21 ರವರೆಗೆ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಉದ್ಯಮ ಆಯ್ಕೆಯ ವಿಧಾನ, ಹಣಕಾಸು ನಿರ್ವಹಣೆ, ಮಾರುಕಟ್ಟೆ ನಿರ್ವಹಣೆ, ಲೆಕ್ಕಪತ್ರ ನಿರ್ವಹಣೆ, ಸಣ್ಣ ಉದ್ಯಮ ನಿರ್ವಹಣೆ ಇತ್ಯಾದಿ ವಿಷಯಗಳನ್ನು ಪರಿಣಿತ ಅತಿಥಿ ಬೋಧಕರಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗುವುದು. 10ನೇ ತರಗತಿ ಪಾಸಾದ ಮಹಿಳಾ ಉದ್ಯಮಕಾಂಕ್ಷಿಗಳು ಜಂಟಿ ನಿರ್ದೇಶಕರ ಕಚೇರಿ, ಕರೂರು ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ದಾವಣಗೆರೆ ಅಥವಾ ತರಬೇತುದಾರರ ದೂರವಾಣಿ ಸಂಖ್ಯೆ ಬಸವರಾಜ ಟಿ.ಬಿ (9164742033), ವಿನಯ ಜಿ.ಕೆ (9886115200) ಅವರನ್ನು ಸಂಪರ್ಕಿಸಬಹುದು.

### ಓದುಗರ ಪತ್ರ

## ಹಳೆ ಪಿ.ಬಿ.ರಸ್ತೆಯಲ್ಲಿ ಗುಂಡಿ ಮುಚ್ಚಿ ಸುಗಮ ಸಂಚಾರಕ್ಕೆ ಅನುವು ಮಾಡಿ



**ಮಾನ್ಯರೇ,**

ದಾವಣಗೆರೆಯಿಂದ ಹರಿಹರದವರೆಗೆ (ಹಳೆ ಪಿ.ಬಿ.ರಸ್ತೆ) ಹೊಸ ಸಿಸಿ ರಸ್ತೆಯೂ ಆಗಿದೆ. ಪ್ರಯಾಣಿಕರ ಸಂಚಾರವೂ ಸಹ ಸುಗಮವಾಗಿದೆ. ಆದರೆ, ಸಿಸಿ ರಸ್ತೆಯ ಕೊನೆ ಭಾಗವಾದ ದೊಡ್ಡಬಾತಿ ಬಳಿ ಒಂದನೇ ರೈಲ್ವೆ ಗೇಟ್ ಹತ್ತಿರ, ಹರಿಹರದಿಂದ ದಾವಣಗೆರೆಗೆ ಹೋಗುವ ರಸ್ತೆಯಲ್ಲಿ ಬೃಹದಾಕಾರದ ಗುಂಡಿ ಬಿದ್ದಿದ್ದು, ವಾಹನ ಸವಾರರಿಗೆ ತುಂಬಾ ತೊಂದರೆಯಾಗಿದೆ. ರಾತ್ರಿ ವೇಳೆಯಂತೂ ಈ ಗುಂಡಿಯಿಂದ ಬೈಕ್, ಕಾರು ಹಾಗೂ ಆಟೋ ಸವಾರರಿಗೆ ದೊಡ್ಡ ತಲೆ ನೋವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಗುಂಡಿಯನ್ನು ತಕ್ಷಣವೇ ಮುಚ್ಚಿ, ಸುಗಮ ಸಂಚಾರಕ್ಕೆ ಅವಕಾಶ ಮಾಡಬೇಕಾಗಿ ವಿನಂತಿ.

**- ಬಸವರಾಜ್ ಸಾಲಿಮಠ, ಪ್ರಯಾಣಿಕ**

# ಶಿಕ್ಷಕರಲ್ಲಿ ಮೌಲ್ಯ ಶಿಕ್ಷಣವಿದ್ದರೆ ಪರಿಪೂರ್ಣ ಮಕ್ಕಳ ತಯಾರಿ ಸುಲಭ

### ಶಿಕ್ಷಕರ ಮೌಲ್ಯ ಶಿಕ್ಷಣ ತರಬೇತಿ ಕಾರ್ಯಾಗಾರದಲ್ಲಿ ಸುಜಾತ ಕೃಷ್ಣ ಅಭಿಲಾಷೆ




ದಾವಣಗೆರೆ, ಸೆ.4- ಗುರುವಿನ ಸ್ಥಾನದಲ್ಲಿರುವ ಶಿಕ್ಷಕರಲ್ಲಿ ಮೌಲ್ಯ ಶಿಕ್ಷಣವಿದ್ದರೆ ಮಕ್ಕಳನ್ನು ತಿದ್ದಿ, ತೀಡಿ ಮೌಲ್ಯಾಧಾರಿತ ಜ್ಞಾನವನ್ನು ಬಿತ್ತಿ ಪರಿಪೂರ್ಣರನ್ನಾಗಿ ಸಬಲ್ಲರು. ಆಗ ಉತ್ತಮ ಸಮಾಜ ನಿರ್ಮಾಣಕ್ಕೂ ರಹದಾರಿಯಾಗಲಿದೆ ಎಂದು ಈಶ್ವರಮ್ಮ ಶಾಲಾಡಳಿತ ಮಂಡಳಿಯ ಅಧ್ಯಕ್ಷೆ ಕೆ.ಆರ್. ಸುಜಾತ ಕೃಷ್ಣ ತಿಳಿಸಿದರು.

ಅವರು, ಇಂದು ನಗರದ ಪಿ.ಜೆ. ಬಡಾವಣೆಯಲ್ಲಿರುವ ಈಶ್ವರಮ್ಮ ಶಾಲೆಯ ಆವರಣದಲ್ಲಿ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆ, ಜ್ಞಾನಜ್ಯೋತಿ ವನಿತಾ ಶಿಕ್ಷಕಿಯರ ವೇದಿಕೆ, ವನಿತಾ ಸಮಾಜದ ವತಿಯಿಂದ ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕಿ ಬಿ.ಆರ್. ಶಾಂತಕುಮಾರಿ ಸ್ಮರಣಾರ್ಥ ಹಮ್ಮಿಕೊಂಡಿದ್ದ ಶಿಕ್ಷಕರಿಗೆ ಮೌಲ್ಯ ಶಿಕ್ಷಣ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಅಜ್ಞಾನವನ್ನು ನಾಶ ಮಾಡಿ ಜ್ಞಾನದ ಕಡೆಗೆ ಮಕ್ಕಳನ್ನು ಕರೆದುಕೊಂಡು ಹೋಗುವವರೇ ಗುರು. ಈ ಸ್ಥಾನದಲ್ಲಿರುವ ಶಿಕ್ಷಕರು ಅದನ್ನು ಉಳಿಸಿಕೊಳ್ಳಬೇಕು. ಅಂತಹ ಗುರುವಿನ ಸ್ಥಾನದಲ್ಲಿರುವ ಇಂದಿನ ಶಿಕ್ಷಕರುಗಳಿಗೆ ಮೌಲ್ಯ ಶಿಕ್ಷಣ ತರಬೇತಿ ಮೂಲಕ ಮೌಲ್ಯಗಳನ್ನು ಹೆಚ್ಚಿಸಿದರೆ ಅವರ ವೃತ್ತಿ ಜೀವನದಲ್ಲಿ ಸಾವಿರಾರು ಮಕ್ಕಳಿಗೆ ವಿದ್ಯೆಯನ್ನು ನೀಡುತ್ತಾರೆ. ಆಗ ಆ ಮಕ್ಕಳು ಸಮಾಜಕ್ಕೆ ಬಂದಾಗ ಉತ್ತಮವಾದ ಸಮಾಜ ನಿರ್ಮಾಣವಾಗುತ್ತದೆ ಎಂದು ಹೇಳಿದರು. ಸಮಾಜದಲ್ಲಿ ವೈದ್ಯರು, ಅಭಿಯಂತರರು, ವಕೀಲರು, ಆರಕ್ಷಕರು ಹೀಗೆ ಮೊದಲಾದವರನ್ನು ತಯಾರು ಮಾಡುವ ಶಿಕ್ಷಕರ ಪಾತ್ರ ಬಹಳ ಮಹತ್ವದ್ದು.

ಇದನ್ನು ಮನಗಂಡ ನಾಗಮ್ಮ ಕೇಶವಮೂರ್ತಿಯವರು ಶಿಕ್ಷಣ ಸಚಿವರಾಗಿದ್ದ ಸಂದರ್ಭದಲ್ಲಿ ಭಾರತದಲ್ಲೇ ಮೊದಲ ಬಾರಿಗೆ ರಾಜ್ಯದಲ್ಲಿನ ಶಿಕ್ಷಕರಿಗೆ ಮೌಲ್ಯ ಶಿಕ್ಷಣ ತರಬೇತಿ ಕಾರ್ಯಾಗಾರವನ್ನು ಪ್ರಾರಂಭಿಸಿ , ಭಗವಾನ್ ಸತ್ಯಸಾಯಿಬಾಬಾ ಅವರಿಂದ ಉದ್ಘಾಟಿಸಿದರು. ದಾವಣಗೆರೆಯಲ್ಲಿ ಸುಮಾರು ಎಂಟು ಹತ್ತು ವರ್ಷಗಳ ಕಾಲ ಈ ಮೌಲ್ಯ ಶಿಕ್ಷಣ ತರಬೇತಿ ಕಾರ್ಯಾಗಾರದಿಂದ ಸಾವಿರಾರು ಶಿಕ್ಷಕರಿಗೆ ತರಬೇತಿ ನೀಡಲಾಗಿದೆ ಎಂದರು.

ಅನುದಾನ ರಹಿತ ಶಾಲೆಗಳ ಪ್ರಧಾನ ಕಾರ್ಯದರ್ಶಿ ಸಿ. ರಾಮಮೂರ್ತಿ ಮಾತನಾಡಿ, ಕೊರೋನಾ ನಂತರದ ಪರಿಸ್ಥಿತಿಯಲ್ಲಿ ಮಕ್ಕಳು ಮೊಬೈಲ್ ಗೆ ಹೆಚ್ಚು ಆಕರ್ಷಿತರಾಗಿದ್ದು, ಶಾಲೆಯಲ್ಲಿ ಅವರನ್ನು ಸುಧಾರಿಸಲು ಶಿಕ್ಷಕರಿಗೆ ದೊಡ್ಡ ಸವಾಲಾಗಿದೆ. ಶಿಕ್ಷಕರು ಮಕ್ಕಳ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು ಪಾಠ ಮಾಡಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ವನಿತಾ ಶಿಕ್ಷಕಿಯರ ವೇದಿಕೆಯ ಅಧ್ಯಕ್ಷೆ ಜಿ.ಎಸ್. ಶಶಿರೇಖಾ, ಈಶ್ವರಮ್ಮ ಟ್ರಸ್ಟ್ ಕಾರ್ಯದರ್ಶಿ ಜಿ.ಆರ್. ವಿಜಯಾನಂದ, ಈಶ್ವರಮ್ಮ ಶಾಲೆಯ ಪ್ರಾಂಶುಪಾಲ ಪ್ರಭು ಕುಮಾರ್, ವನಿತಾ ಶಿಕ್ಷಕಿಯರ ವೇದಿಕೆಯ ಕಾರ್ಯದರ್ಶಿ ಎಸ್.ಎಂ. ಮಲ್ಲಮ್ಮನಾಗರಾಜ್ ಸೇರಿದಂತೆ ಇತರರು ಇದ್ದರು.

## ಗಣೇಶ ಮಹೋತ್ಸವ : ಕೇದಾರನಾಥ ದೇವಾಲಯ ವೀಕ್ಷಿಸಿದ ಸಿ.ಟಿ. ರವಿ

ದಾವಣಗೆರೆ, ಸೆ.4- ಬಂಬೂ ಬಜಾರಿನಲ್ಲಿ ಮೇದಾರ ಸಮಾಜದ ವತಿಯಿಂದ 50ನೇ ವರ್ಷದ ಸುವರ್ಣ ಗಣೇಶೋತ್ಸವದ ಅಂಗವಾಗಿ ಪೂರ್ಣ ಪ್ರಮಾಣದ ಬಿದಿರಿನಿಂದ ನಿರ್ಮಿಸಿರುವ ಶ್ರೀ ಕೇದಾರನಾಥ ದೇವಾಲಯ ಮಾದರಿಯ ಮಂಟಪವನ್ನು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ನಿನ್ನೆ ವೀಕ್ಷಿಸಿದರು.

ಈ ಸಂದರ್ಭದಲ್ಲಿ ದಾವಣಗೆರೆ ಮೇದಾರ ಸಮಾಜದ ವತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಚಿಕ್ಕಮಗಳೂರು ಶಾಸಕ ಸಿ.ಟಿ. ರವಿಯವರು ಸ್ವಾತಂತ್ರ್ಯ ಪೂರ್ವದಲ್ಲಿ ಬಾಲಗಂಗಾಧರ ತಿಲಕ್ ಅವರು ಗಣೇಶೋತ್ಸವವನ್ನು ಆರಂಭಿಸಿದ್ದರು. ಯುವಕರು ಮತ್ತು ಸಮಾಜವನ್ನು ಒಗ್ಗೂಡಿಸಲು ಅದೇ ರೀತಿ ದಾವಣಗೆರೆ ಮೇದಾರ ಸಮಾಜದವರು ನಿರ್ಮಿಸಿರುವ ಈ ಕೇದಾರನಾಥ ಮಂಟಪವನ್ನು ವೀಕ್ಷಿಸಿದರೆ ಬಾಲಗಂಗಾಧರ ತಿಲಕ್ ಅವರು ಕೈಗೊಂಡ ಗಣೇಶೋತ್ಸವದ ಕನಸು ಇಂದಿಗೆ ಸಾಕಾರಗೊಂಡಿದೆ ಎಂಬ ಮನೋಭಾವನೆ ಮೂಡುತ್ತಿದೆ. ಈ ಮಂಟಪವು ಸಮಾಜದ ಒಗ್ಗಟ್ಟಿಗೆ ಹಿಡಿದ ಕೈಗನ್ನಡಿಯಾಗಿದೆ. ಇದೇ ರೀತಿ ತಾವು ಒಗ್ಗಟ್ಟಿನಿಂದ ಇದ್ದು ಸಮಾಜದ ಏಳಿಗೆಗೆ ಶ್ರಮಿಸುವಂತೆ ಕರೆ ನೀಡಿದರು.

ಸಮಾಜದವರು ಯಾವುದೇ ರೀತಿಯ ಕೃತಕ ವಸ್ತುಗಳನ್ನು ಬಳಸದೇ ನೈಸರ್ಗಿಕವಾಗಿ ದೊರೆಯುವ ಬಿದಿರು ಮತ್ತು ಬಂಬೂಗಳನ್ನು ಬಳಸಿ ಮೇದಾರ ಕರ ಕುಶಲ ಕರ್ಮಿಗಳು ಹಗಲು ರಾತ್ರಿ ಶ್ರಮವಹಿಸಿ ಈ ಮಂಟಪವನ್ನು ನಿರ್ಮಿಸಿದ್ದು, ಸಾರ್ವಜನಿಕರು ಇದನ್ನು ವೀಕ್ಷಿಸಿ ಈ ಸಮಾಜದವರನ್ನು ಪ್ರೋತ್ಸಾಹಿಸುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಟೆಂಗಿನಕಾಯಿ ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ, ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ್ ಬಿ.ಎಸ್, ಸಮಾಜದ ಅಧ್ಯಕ್ಷ ಟಿ. ಬಸವರಾಜ, ತಿಮ್ಮಣ್ಣ, ಸಂಡೂರು, ಗಿರೀಶ್ ಹೆಚ್.ಯು, ಶ್ರೀನಿವಾಸ್ ಟಿ., ನಾಗರಾಜ ಕೆ., ಯುವ ವೇದಿಕೆ ಅಧ್ಯಕ್ಷ ಹೆಚ್. ರಾಘವೇಂದ್ರ, ಉಮೇಶ್ ಜಿ., ಪ್ರಕಾಶ್ ಜಿ., ನರೇಂದ್ರ, ಯಲ್ಲೇಶ್, ಸೋಮಶೇಖರ್ ಸಿ.ಬಿ., ಶಿವಕುಮಾರ್ ಮತ್ತು ಇತರರು ಉಪಸ್ಥಿತರಿದ್ದರು.



## ಕಾರಿಗನೂರಿನಲ್ಲಿ ಇಂದು - ನಾಳೆ ಶ್ರೀ ಸಿದ್ಧಾರೂಢ ಸ್ವಾಮಿಗಳ ಪುಣ್ಯಮಂಗಲ

ಚನ್ನಗಿರಿ ತಾಲ್ಲೂಕಿನ ಕಾರಿಗನೂರು ಗ್ರಾಮದ ಶ್ರೀ ನಿಜಗುಣ ಶಿವಯೋಗಿ ಆಶ್ರಮದಲ್ಲಿ ಶ್ರಾವಣ ಮಾಸದ 47ನೇ ವರ್ಷದ ಶ್ರೀ ಸಿದ್ಧಾರೂಢ ಸ್ವಾಮಿಗಳ ಪುಣ್ಯಮಂಗಲ ಕಾರ್ಯಕ್ರಮವು ಇಂದು ಮತ್ತು ನಾಳೆ ಜರುಗಲಿದೆ.

ಸುಕ್ಷೇತ್ರ ಇಂಚಲದ ಶ್ರೀ ಶಿವಯೋಗಿಶ್ವರ ಸಾಧು ಸಂಸ್ಥಾನ ಮಠದ ಶ್ರೀ ಡಾ. ಶಿವಾನಂದ ಭಾರತಿ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಲಿದ್ದು, ಶ್ರೀ ನಿಜಗುಣ ಆಶ್ರಮದ ಶ್ರೀ ಸದ್ಗುರು ಬಸವಾನಂದ ಭಾರತಿ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದಾರೆ.

ಇಂದು ಸಂಜೆ 6.30 ರಿಂದ ರಾತ್ರಿ 9 ಗಂಟೆಯವರೆಗೆ ಪ್ರವಚನಗಳು ನಡೆಯಲಿವೆ. ನಾಳೆ ಮಂಗಳವಾರ ಬೆಳಿಗ್ಗೆ 8 ರಿಂದ ಶ್ರೀ ಸಿದ್ಧರೂಢ ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿ ಉತ್ಸವ ನಡೆಯಲಿದೆ. ಮಧ್ಯಾಹ್ನ 12 ರಿಂದ ನಡೆಯುವ ಅನ್ನಸಂತರ್ಪಣೆಯಲ್ಲಿ ಶ್ರೀ ಶಿವಾನಂದ ಸ್ವಾಮೀಜಿ, ಶ್ರೀ ಮುರುಳಿಧರ ಸ್ವಾಮೀಜಿ, ಯೋಗಾನಂದ ಸ್ವಾಮೀಜಿ, ಕೃಷ್ಣಾನಂದ ಸ್ವಾಮೀಜಿ, ಹನುಮಾನಂದ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು ಪಾಲ್ಗೊಳ್ಳಲಿದ್ದಾರೆ.

ಆಹ್ವಾನಿತರಾಗಿ ಮಾಜಿ ಶಾಸಕ ಮಹಿಮ ಜೆ. ಪಟೇಲ್, ಜಿ.ಪಂ ಮಾಜಿ ಸದಸ್ಯ ತೇಜಸ್ವಿ ವಿ. ಪಟೇಲ್, ಗ್ರಾಪಂ ಅಧ್ಯಕ್ಷರಾದ ಹೇಮಾವತಿ ಅವರು ಭಾಗವಹಿಸಲಿದ್ದಾರೆ.

## ಆನಗೋಡಿನಲ್ಲಿಂದು ರೈತರಿಗೆ ಇ-ಸಹಮತಿ ಯೋಜನೆ ಕಾರ್ಯಾಗಾರ

ದಾವಣಗೆರೆ ತಾಲ್ಲೂಕು ಆನಗೋಡು ಗ್ರಾಮ ಪಂಚಾಯಿತಿಯಲ್ಲಿ ಇ- ಸಹಮತಿ ಕಾರ್ಯಾಗಾರವು ಇಂದು ನಡೆಯಲಿದೆ.

ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇ-ಆಡಳಿತ ಕೇಂದ್ರದ ಮೂಲಕ ರೈತರಿಗೆ ಬೆಳೆ ಪ್ರಕಾರ,ಬೆಳೆಯ ಇತಿಹಾಸ, ನೀರಾವರಿ ವಿವರ,ಕೃಷಿ ಭೂಮಿಗಳ ಭೌಗೋಳಿಕ ಮಾಹಿತಿ, ಬಿತ್ತನೆ ಮಾಹಿತಿ ದತ್ತಾಂಶವನ್ನು ಪ್ರವೇಶಿಸಲು ತಮ್ಮ ಒಪ್ಪಿಗೆ ನೀಡುವ ಬಗ್ಗೆ ರೈತರಿಗೆ ತಂತ್ರಾಂಶ ಬಳಸುವ ಬಗ್ಗೆ ಕಾರ್ಯಾಗಾರ ಏರ್ಪಡಿಸಲಾಗಿದೆ.

## ಮಲೇಬೆನ್ನೂರಿನಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸೇವಾ ಪ್ರತಿನಿಧಿಗಳ ಸಭೆ



ಮಲೇಬೆನ್ನೂರು, ಸೆ.4- ಪಟ್ಟಣದ ಕಾಳಿಕಾಂಭ ಸಮುದಾಯ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಲೇಬೆನ್ನೂರು ವ್ಯಾಪ್ತಿಯ ಸೇವಾ ಪ್ರತಿನಿದಿಗಳ ದ್ವಿತೀಯ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಜಿಲ್ಲೆಯ ಹಿರಿಯ ನಿರ್ದೇಶಕ ವಿಜಯ್ ಕುಮಾರ್ ನಾಗನಾಳ್ ಅವರು ದೀಪ ಬೆಳಗಿಸುವುದರ ಮೂಲಕ ಸಭೆಯನ್ನು ಉದ್ಘಾಟಿಸಿದರು.

ಯೋಜನಾಧಿಕಾರಿ ವಸಂತ್ ದೇವಾಡಿಗ, ಜಿಲ್ಲಾ ಸಿಎಸ್‌ಸಿ ನೋಡಲ್ ಅಧಿಕಾರಿ ನಂಜುಂಡ ಪ್ರಸಾದ್ ಶ್ರೀವತ್ಸ ಹಾಗೂ ಸಿಎಸ್‌ಸಿ ನೋಡಲ್ ಅಧಿಕಾರಿ ಮಂಜಪ್ಪ, ಕೃಷಿ ಮೇಲ್ವಿಚಾರಕ ಗಂಗಾಧರ್, ಆಂತರಿಕ ಲೆಕ್ಕ ಪರಿಶೋಧಕ ಚಿದಂಬರ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ರಕ್ಷಿತಾ, ಹಣಕಾಸು ಪ್ರಬಂಧಕಿ ಆಶಾ, ಆಡಳಿತ ಪ್ರಬಂಧಕ ರಾಕೇಶ್ ಹಾಗೂ ವಲಯದ ಮೇಲ್ವಿಚಾರಕರಾದ ಚಂದ್ರಪ್ಪ, ರವೀಂದ್ರ, ಪದ್ಮಾವತಿ, ನಂದಾ, ಶಾರದಾ, ಸಂಪತ್ ಲಕ್ಷ್ಮಿ, ಸವಿತಾ ಸೇರಿದಂತೆ ಇತರರು ಭಾಗವಹಿಸಿದ್ದರು.

ಈ ಪ್ರಗತಿ ಪರಿಶೀಲನೆಯ ಸವಿ ನೆನಪಿಗಾಗಿ ಎಲ್ಲಾ ಸೇವಾ ಪ್ರತಿನಿಧಿಗಳಿಗೆ ಪರಿಸರ ಸಂರಕ್ಷಣೆ ಬಗ್ಗೆ ಕಾಳಜಿಯನ್ನು ಮೂಡಿಸುವ ಸಲುವಾಗಿ ಸಸಿಗಳನ್ನು ವಿತರಣೆ ಮಾಡಲಾಯಿತು.

## ಎಸ್ಸೆಸ್ಸೆಂ ಉತ್ಸವ್ : ಫುಟ್ಪಾತ್‌ನಲ್ಲಿ ಹಣ್ಣು, ತರಕಾರಿ ಮಾರುವವರಿಗೆ ರೈನ್ ಕೋಟ್ ವಿತರಣೆ



ದಾವಣಗೆರೆ ಸೆ.4 - ಮಾಜಿ ಕ್ರೀಡಾ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ 55 ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ನಗರದೆಲ್ಲೆಡೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಪಿಜೆ ಬಡಾವಣೆಯಲ್ಲಿ ಇರುವ ಚರ್ಚ್ ಮುಂಭಾಗದಲ್ಲಿ ಹಣ್ಣು, ತರಕಾರಿ ಮಾರುವ ಜನರಿಗೆ ನಿವೃತ್ತ ಪೊಲೀಸ್ ಡಿವೈಎಸ್ಪಿ ರವಿ ನಾರಾಯಣ್ ಅವರ ನೇತೃತ್ವದಲ್ಲಿ ಹಣ್ಣು, ತರಕಾರಿ ಮಾರುವ ಜನರು ಮಳೆಯಲ್ಲಿ ನೆನೆಯದಂತೆ ರೈನ್ ಕೋಟ್ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ ಶಿವಕುಮಾರ್, ವಿರೋಧ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್, ಮಾಜಿ ವಿರೋಧ ಪಕ್ಷದ ನಾಯಕ ಎ.ನಾಗರಾಜ್, ವಾರ್ಡ್ ಮುಖಂಡರಾದ ಗೋಪಾಲ್ ಪರಶುರಾಮ್, ಜಗದೀಶ್, ಯುವರಾಜ್, ಕರಿಬಸಪ್ಪ, ರವಿ, ಎಸ್.ಶಿವಾಜಿರಾವ್, ಮೇಘರಾಜ್ ಇನ್ನು ಮುಂತಾದರು ಹಾಜರಿದ್ದರು.

## ಜಿಲ್ಲೆಯಲ್ಲಿ ಮಳೆಗೆ 15 ಮನೆಗಳಿಗೆ ಹಾನಿ

ದಾವಣಗೆರೆ, ಸೆ.4- ಜಿಲ್ಲೆಯಲ್ಲಿ 2 ರಂದು ಬಿದ್ದ ಮಳೆಯ ವಿವರದನ್ವಯ 1.6 ಮಿ.ಮೀ. ಸರಾಸರಿ ಮಳೆಯಾಗಿದ್ದು, ತಾಲ್ಲೂಕುವಾರು ಮಳೆ ಹಾಗೂ ಹಾನಿ ವಿವರ ಈ ಕೆಳಕಂಡಂತಿದೆ.

ಚನ್ನಗಿರಿಯಲ್ಲಿ ವಾಡಿಕೆ ಮಳೆ 3.4 ಮಿ.ಮೀ ಹಾಗೂ ವಾಸ್ತವ ಮಳೆ 0.6 ದಾವಣಗೆರೆ ತಾಲ್ಲೂಕಿನಲ್ಲಿ ವಾಡಿಕೆ 1.0 ಮಿ.ಮೀ ಹಾಗೂ ವಾಸ್ತವ 7.0, ಹರಿಹರದಲ್ಲಿ ವಾಡಿಕೆ 2.0 ಹಾಗೂ ವಾಸ್ತವ 0.3, ಹೊನ್ನಾಳಿ ವಾಡಿಕೆ 1.5 ಹಾಗೂ ವಾಸ್ತವ 0.3, ಜಗಳೂರು ವಾಡಿಕೆ 0.9 ಹಾಗೂ ವಾಸ್ತವ 1.1, ನ್ಯಾಮತಿಯಲ್ಲಿ ವಾಡಿಕೆ 2.4 ಮಿ.ಮೀ ಹಾಗೂ ವಾಸ್ತವ 0.2 ಮಿ.ಮೀ ಮಳೆಯಾಗಿದೆ.

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ 2 ಕಚ್ಚಾ ಮನೆ ಭಾಗಶಃ ಹಾನಿಯಾಗಿದೆ. ನ್ಯಾಮತಿ ತಾಲ್ಲೂಕಿನಲ್ಲಿ 6, ಚನ್ನಗಿರಿ ತಾಲ್ಲೂಕಿನಲ್ಲಿ 6 ಪಕ್ಕಾ ಮನೆಗಳಿಗೆ ತೀವ್ರ ಹಾನಿಯಾಗಿದೆ. 1 ಪಕ್ಕಾ ಮನೆ ಭಾಗಶಃ ಹಾನಿಯಾಗಿದೆ. ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ಯೋಗ ಸ್ಪರ್ಧೆ : ಪಲ್ಲವಿ.ಕೆ ಪ್ರಥಮ



ದಾವಣಗೆರೆ, ಸೆ. 4 - ನಗರದ ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿ, ಕುಮಾರ್ ಲಾಲ್ ಮತ್ತು ಶ್ರೀಮತಿ ನಾಗರತ್ನ ದಂಪತಿಯ ಪುತ್ರಿ ಪಲ್ಲವಿ ಕೆ. ಜಿಲ್ಲಾ ಮಟ್ಟದ ಪ್ರೌಢಶಾಲಾ ಕ್ರೀಡಾ ಕೂಟದ ಯೋಗ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಿದ್ದಾಳೆ.

## ನಿವೃತ್ತ ಯೋಧ ಚಂದ್ರಣ್ಣಗೆ ಸನ್ಮಾನ



ದಾವಣಗೆರೆ, ಸೆ. 4 - ದೇಶದ ಹೆಮ್ಮೆಯ ಯೋಧರಾಗಿ 27 ವರ್ಷಗಳ ಕಾಲ ಸೇವೆ ಸಲ್ಲಿಸಿದ ಚಂದ್ರಣ್ಣ ಅವರಿಗೆ ನಿಟ್ಟುವಳ್ಳಿಯ ಎಸ್. ಪ್ರವೀಣ್ ಕುಮಾರ್, ಯುವ ಕಾಂಗ್ರೆಸ್ ಮುಖಂಡ ಅರ್ಜುನ್, ಆನಗೋಡು ನಾಗರಾಜ್ ಹಾಗೂ ಗೌರಮ್ಮ ಸೇರಿದಂತೆ ಇನ್ನಿತರರು ಗೌರವ ಸಮರ್ಪಣೆ ಮಾಡಿದರು.


**ಶಿಕ್ಷಕರಿಗೆ ಉಚಿತ ತಪಾಸಣೆ ಶಿಬಿರ**

ಶಿಕ್ಷಕರ ದಿನದ ಪ್ರಯುಕ್ತ ಇದೇ ಮೊದಲ ಬಾರಿಗೆ ಶಿಕ್ಷಣ ಕ್ಷೇತ್ರದವರಿಗೆ ಎಲ್ಲಾ ತರಹದ ರೋಗಗಳಿಗೆ ಉಚಿತ ತಪಾಸಣೆ ನಡೆಸಿ ಶೇ. 20-40 ರಷ್ಟು ಚಿಕಿತ್ಸೆಯಲ್ಲಿ ರಿಯಾಯಿತಿ ನೀಡಲಾಗುವುದು.

*ವಿ.ಸೂ. : ಶಿಕ್ಷಕರ (ಶಾಲೆ/ಕಾಲೇಜು) ಗುರುತಿನ ಚೀಟಿ ತರುವುದು ಕಡ್ಡಾಯ*

**ತಪಾಸಣೆ ದಿನಾಂಕ : 4.9.2022 ರಿಂದ 7.09.2022ರವರೆಗೆ.**

*ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :*

**ಅನ್ವಯ ಆಯುರ್ವೇದ ಆಸ್ಪತ್ರೆ**

ANVAYA

#1981, 10ನೇ ಕ್ರಾಸ್, ಎಂಸಿಸಿ ಎ ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ.

**08192 - 252228, 86186 42929**



**ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**

ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ.ರಸ್ತೆ, ದಾವಣಗೆರೆ - 577002.

**ಸದಸ್ಯರ ಗಮನಕ್ಕೆ**

**ಬ್ಯಾಂಕಿನ 61ನೇ ವಾರ್ಷಿಕ ಮಹಾಸಭೆಯು ದಿನಾಂಕ : 11.09.2022ರ ಭಾನುವಾರ ಬೆಳಗ್ಗೆ 11-30ಕ್ಕೆ ಶ್ರೀ ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ, ಸದಸ್ಯರು ವಾರ್ಷಿಕ ಮಹಾಸಭೆಗೆ ತಪ್ಪದೇ ಹಾಜರಾಗಲು ಕೋರಿದೆ.**

- ಸಭೆಗೆ ಬರುವಾಗ ಕಡ್ಡಾಯವಾಗಿ ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿಯನ್ನು ತರತಕ್ಕದ್ದು.
- ಗುರುತಿನ ಚೀಟಿ ಪಡೆಯದೇ ಇರುವ ಗ್ರಾಹಕರು ಕಛೇರಿ ವೇಳೆಯಲ್ಲಿ ಆಡಳಿತ ಕಛೇರಿಗೆ ಬಂದು ಗುರುತಿನ ಚೀಟಿ ಪಡೆಯಬಹುದಾಗಿದೆ.
- ಕೋವಿಡ್ ಮಾರ್ಗಸೂಚಿ ಅನ್ವಯ ಸದಸ್ಯರು ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಹಾಗೂ ಕೋವಿಡ್ ನಿಯಮಗಳನ್ನು ಪಾಲಿಸುವುದು.
- ಸದಸ್ಯರು ಸಭೆಗೆ ಹಾಜರಾಗುವಾಗ ಸದಸ್ಯತ್ವದ ರಿಜಿಸ್ಟರ್‌ನಲ್ಲಿ ತಮ್ಮ ಸಹಿಯನ್ನು ಮಾಡಲು ಕೋರಿದೆ. ಸದಸ್ಯರು ತಮ್ಮ ವಿಳಾಸ ಬದಲಾದಲ್ಲಿ ಕಛೇರಿ ಸಮಯದಲ್ಲಿ ಆಡಳಿತ ಕಛೇರಿಗೆ ಬಂದು ಸಂಬಂಧಿಸಿದ ದಾಖಲೆಗಳನ್ನು ನೀಡಿ ಷೇರು ಖಾತೆಯಲ್ಲಿ ವಿಳಾಸ ಬದಲಾಯಿಸಿಕೊಳ್ಳಲು ಕೋರಿದೆ.
- ಡಿವಿಡೆಂಡ್ ಪಡೆಯಲು ಖಾತೆ ಹೊಂದುವುದು ಕಡ್ಡಾಯವಾಗಿರುತ್ತದೆ ಹಾಗೂ 2018-19ನೇ ಸಾಲಿನ ಡಿವಿಡೆಂಡ್ ಪಡೆಯದೇ ಇರುವ ಸದಸ್ಯರು ಕೂಡಲೇ ಆಡಳಿತ ಕಛೇರಿಗೆ ಬಂದು ತಮ್ಮ ಡಿವಿಡೆಂಡ್ ಪಡೆಯುವುದು. ಇಲ್ಲವಾದಲ್ಲಿ ಬ್ಯಾಂಕಿನ ಉಪವಿಧಿ ಪ್ರಕಾರ ಆಪದ್ಧನ ನಿಧಿಗೆ ವರ್ಗಾವಣೆ ಮಾಡಲಾಗುವುದು.
- ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನದ ಪ್ರಕಾರ ಸದಸ್ಯರು/ಖಾತೆದಾರರು ತಮ್ಮ ಇತ್ತೀಚಿನ ಕೆ.ವೈ.ಸಿ ದಾಖಲೆಗಳ ನಕಲು ಪ್ರತಿಯನ್ನು ಬ್ಯಾಂಕಿಗೆ ಸಲ್ಲಿಸಿ ಖಾತೆಯನ್ನು ಸರಿಪಡಿಸಿಕೊಳ್ಳುವುದು.

**ಕೋಗುಂಡಿ ಬಕ್ಕೇಶಪ್ಪ** ಅಧ್ಯಕ್ಷರು | **ಅಂದನೂರು ಮುಪ್ಪಣ್ಣ** ಉಪಾಧ್ಯಕ್ಷರು | **ಡಿ.ವಿ. ಆರಾಧ್ಯಮಠ್** ಪ್ರಧಾನ ವ್ಯವಸ್ಥಾಪಕರು

# ಸಂಕೋಚ ಸ್ವಭಾವದ ಮಿಸ್ತ್ರಿ ಸಾವಿನಿಂದ ಆಘಾತ



ಮುಂಬೈ, ಸೆ. 4 – ಭಾನುವಾರ ಮಹಾರಾಷ್ಟ್ರದಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಉದ್ಯಮಿ ಸೈರಸ್ ಮಿಸ್ತ್ರಿ ಸಾವನ್ನಪ್ಪಿರುವುದು, ಭಾರತದ ಔದ್ಯಮಿಕ ವಲಯಕ್ಕೆ ಆಘಾತ ನೀಡಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವಾರು ಗಣ್ಯರು ಮಿಸ್ತ್ರಿ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

ಸೈರಸ್ ಅವರು ಶಪೂರ್‌ಜೀ ಪಲ್ಲೊಂಜಿ ಸಮೂಹದ ನಿಯಂತ್ರಣ ಹೊಂದಿದ್ದ ಮಿಸ್ತ್ರಿ ಕುಟುಂಬದ ಕುಡಿ. ನಂತರದಲ್ಲಿ ಅವರು ಪಲ್ಲೊಂಜಿ ಸಮೂಹದ ಮುಖ್ಯಸ್ಥರಾದರು. ಆದರೆ, ಅವರ ಹೆಸರು ಚಿರಪರಿಚಿತವಾಗಿದ್ದು, 2012ರಲ್ಲಿ ಟಾಟಾ ಸಮೂಹದ ಮುಖ್ಯಸ್ಥರಾಗಿ ನೇಮಕಗೊಂಡಾಗ. 100 ಶತಕೋಟಿ ಡಾಲರ್‌ಗೂ ಹೆಚ್ಚು ಮೌಲ್ಯದ ಟಾಟಾ ಸಮೂಹವನ್ನು ಅವರು ಅಲ್ಪ ಕಾಲವಷ್ಟೇ ಮುನ್ನಡೆಸಲು ಸಾಧ್ಯವಾಯಿತು.

ಆಗ 44 ವರ್ಷದವರಾಗಿದ್ದ ಮಿಸ್ತ್ರಿ ಅವರು ಟಾಟಾ ಸಮೂಹದ ಮುಖ್ಯಸ್ಥರಾಗಲು ಹಿಂಜರಿದಿದ್ದರು. ಸ್ವತಃ ರತನ್ ಟಾಟಾ ಅವರೇ ಮಿಸ್ತ್ರಿ ಮನವೊಲಿಸಿದ್ದರು ಎಂದು ಹೇಳಲಾಗುತ್ತಿತ್ತು.

ಕಿರಿಯ ವಯಸ್ಸಿನ ವ್ಯಕ್ತಿಯನ್ನು ಬೃಹತ್ ಔದ್ಯಮಿಕ ಸಮೂಹದ ನಾಯಕರಾಗಿ ನೇಮಿಸಿದ್ದು ದಿಟ್ಟ ಕ್ರಮ ಎಂದು ಪರಿಗಣಿಸಲಾಗಿತ್ತು. ಆದರೆ, ನಾಲ್ಕು ವರ್ಷಗಳ ನಂತರ 2016ರಲ್ಲಿ ಅವರನ್ನು ಟಾಟಾದ ಆಡಳಿತ ಮಂಡಳಿಯಿಂದ ಹೊರ ಹಾಕಲಾಗಿತ್ತು.

ಆರಂಭದ ಕೆಲ ತಿಂಗಳ ಕಾಲ ತಮ್ಮ ಕಾರ್ಯನಿರ್ವಹಣೆಗೆ ಮೆಚ್ಚುಗೆ ಇತ್ತು. ನಂತರ ಯಾವ ಕಾರಣಕ್ಕಾಗಿ ತಮ್ಮನ್ನು ಅಧ್ಯಕ್ಷ ಸ್ಥಾನದಿಂದ ತೆಗೆದು ಹಾಕಲಾಯಿತು ಎಂಬುದನ್ನು ತಿಳಿಯಲು ಅವರು ಬಯಸಿದ್ದರು.

ಮಿಸ್ತ್ರಿ ಅತ್ಯಂತ ಸಂಕೋಚದ ಸ್ವಭಾವದವರಾಗಿದ್ದರು. ಕೆಲಸವೇ ಮಾತನಾಡಲಿ ಎಂದು ಬಯಸಿದ್ದರು. ಹೀಗಾಗಿ ಟಾಟಾ ಸಮೂಹದ ಅಧ್ಯಕ್ಷರಾಗಿದ್ದಾಗಲೂ ಅವರು ಮಾಧ್ಯಮಗಳ ಎದುರು ಬಂದಿದ್ದು ಕಡಿಮೆಯೇ. ಟಾಟಾ ಸಮೂಹದಿಂದ ಹೊರ ಬಿದ್ದ ನಂತರವೇ ಅವರು ತುಸು ಮುಕ್ತವಾಗಿ ಮಾತನಾಡಿದ್ದರು. ಟಾಟಾ ಸಮೂಹದಿಂದ ಹೊರ ದೂಡಲ್ಪಟ್ಟ ಸಮಯದಲ್ಲಿ ಸ್ವಲ್ಪ ದಿನ ಮಿಸ್ತ್ರಿ ದೊಡ್ಡ ದನಿಯಲ್ಲಿ ಅಭಿಯಾನ ನಡೆಸಿದ್ದರು. ನಂತರ ಮತ್ತೆ ಮೌನದ ಚಿಪ್ಪಿನೊಳಗೆ ಸೇರಿದ್ದರು.ತಮ್ಮನ್ನು ಟಾಟಾ ಸಮೂಹದ ಮುಖ್ಯಸ್ಥ ಸ್ಥಾನದಿಂದ ಹೊರ ಹಾಕಿದ ಬಗ್ಗೆ ಅವರು ಸುಪ್ರೀಂ ಕೋರ್ಟ್‌ವರೆಗೆ ಹೋರಾಟ ನಡೆಸಿದರಾದರೂ ಯಶಸ್ಸು ಕಾಣಲಿಲ್ಲ.

# 'ಶೀಲ' ಹೆಣ್ಣು ಮಕ್ಕಳಿಗೆ ಮಾತ್ರವಲ್ಲ ; ಗಂಡು ಮಕ್ಕಳಿಗೂ ಅನ್ವಯಿಸುತ್ತದೆ

## ಹಿರೇಸಾದರಹಳ್ಳಿಯ 'ಮತ್ತೆ ಕಲ್ಯಾಣ' ಕಾರ್ಯಕ್ರಮದಲ್ಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಮತ

ಅರಸೀಕೆರೆ,ಸೆ.4- 'ಶೀಲ' ಹೆಣ್ಣುಮಕ್ಕಳಿಗೆ ಮಾತ್ರವಲ್ಲ; ಗಂಡು ಮಕ್ಕಳಿಗೂ ಅನ್ವಯಿಸುವುದು. ಸಂಗ್ರಹ ಬುದ್ಧಿ ಹೆಚ್ಚಾದಾಗಲೇ ಭ್ರಷ್ಟಾಚಾರಕ್ಕೆ ಎಡೆಯಾಡುವುದು. ನಮ್ಮ ಸಂಗ್ರಹಕ್ಕೆ ಒಂದು ಮಿತಿ ಇರಬೇಕು. ಇನ್ನೊಬ್ಬರಿಗೆ ಹೇಳುವುದಕ್ಕಿಂತ ಮೊದಲು ನಮ್ಮ ನಮ್ಮ ಮನಸ್ಸುಗಳು ಹೇಳುವುದನ್ನು ಕೇಳಿಸಿಕೊಳ್ಳಬೇಕು ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಇಲ್ಲಿನ ಮತ್ತೆ ಕಲ್ಯಾಣ ಸಮಿತಿ – ಹಿರೇ ಸಾದರಹಳ್ಳಿ ಮತ್ತು ಸಾಣೇಹಳ್ಳಿ ಶ್ರೀ ತರಳಬಾಳು ಜಗದ್ಗುರು ಶಾಖಾಮಠದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಮತ್ತೆ ಕಲ್ಯಾಣ' ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಶ್ರೀ ಪಂಡಿತಾರಾಧ್ಯ ಸ್ವಾಮಿಗಳು ಮಾತನಾಡಿ, ಭಾರತ ಪುಣ್ಯ ಭೂಮಿ. ಈ ಪುಣ್ಯ ಭೂಮಿಯಲ್ಲಿ ಬದುಕುವ ನಾವೆಲ್ಲರೂ ಪುಣ್ಯವಂತರಾಗಬೇಕಿತ್ತು. ಆದರೆ ಇಂದು ಜಾತೀಯತೆ, ಮೌಢ್ಯ, ಭ್ರಷ್ಟಾಚಾರ, ಕೊಲೆ, ಸುಲಿಗೆ ಮೊದಲಾದ ತರತಮಗಳು ನಿತ್ಯ ನಿರಂತರವಾಗಿ ನಡೆದು ಪಾಪ ಭೂಮಿಯಾಗುತ್ತಿದೆ. ಬಹಿರಂಗದಲ್ಲಿ



ಅನ್ಯರ ಜೊತೆ ಮಾತನಾಡುವುದಕ್ಕಿಂತ ಅಂತರಂಗದ ಜೊತೆ ಮಾತನಾಡಬೇಕು. ಭಕ್ತನ ಗೆಲುವಿಗೆ ಮತ್ತು ಭಗವಂತನ ಸೋಲಿಗೆ ಭಕ್ತರಲ್ಲಿರುವ ನಿಷ್ಕಲ್ಮಶ ಭಕ್ತಿಯೇ ಕಾರಣ. ನಮ್ಮ ಆಲೋಚನೆಗಳು ಸಕಾರಾತ್ಮಕವಾಗಿ, ಆದರ್ಶಯುತವಾಗಿದ್ದರೆ, ನಮಗೂ ಒಳಿತಾಗುವುದು, ಸಮಾಜಕ್ಕೂ ಒಳಿತಾಗುವುದು. ಪರಧನ ಮತ್ತು ಪರಸ್ತ್ರೀಯ ಮೋಹವೇ ಏನೆಲ್ಲ ಅನಾಹುತಗಳಿಗೆ ಕಾರಣವಾಗುವವು. ಇಂಥ ಪಾಪಗಳನ್ನು ಮಾಡಿ ದೊಡ್ಡ ದೊಡ್ಡ ದೇವಾಲಯಗಳನ್ನು ಕಟ್ಟಿದರೆ, ದಾನ ಮಾಡಿದರೆ ಪುಣ್ಯ ಬರುವುದಿಲ್ಲ. ಪಾಪ ಪರಿಹಾರಕ್ಕೆ ಪ್ರಾಯಶ್ಚಿತ್ತಕ್ಕಿಂತ ಪಶ್ಚಾತ್ತಾಪವೇ ಸರಿಯಾದ ಮಾರ್ಗ.

ನಿಜವಾದ ಲಿಂಗವಂತ ಪರಧನ, ಪರಸ್ತ್ರೀಯ ರಿಂದ ದೂರ ಇರುವನು. ಕೇವಲ ಕಾವಿ ಹಾಕಿಕೊಂಡವನು, ಅಕ್ಷರಗಳನ್ನು ಹೇಳಿಕೊಟ್ಟವನು, ಮಠಾಧಿಪತಿಗಳಾದವರು ಗುರುಗಳಲ್ಲ; ಪರಧನ, ಪರಸ್ತ್ರೀಗೆ ಎಳೆಸದೇ, ಪರದೈವಗಳಿಗೆ ಎರಗದೆ ಇರುವವರು ನಿಜವಾದ ಗುರು. ಯಾರು ಬೇಕಾದರೂ ವೇಷ, ಭಾಷೆಯಿಂದ ಮನುಷ್ಯನಾಗ ಬಹುದು. ಆದರೆ ಕೈ-ಬಾಯಿ-ಕಚ್ಚೆ ಸ್ವಚ್ಛವಾಗಿರದಿದ್ದರೆ ಮನುಷ್ಯ ರೂಪದ ರಾಕ್ಷಸ ನಾಗುವನು.

ಈ ಎಚ್ಚರ ಬಂದರೆ ಸುಖವಾಗಿರಲು ಸಾಧ್ಯ. ಮನುಷ್ಯ ಮೂಲತಃ ಒಳ್ಳೆಯವನೇ. ಸರಿಯಾದ ಸಂಸ್ಕಾರ ಸಿಗದೆ ಕೆಟ್ಟು ಹೋಗುವರು. ವಚನಗಳು ವಿಶ್ವಮಾನವರಾಗಿ ಬೆಳೆಯಲು ಸಹಕಾರಿ. ಪ್ರತಿಯೊಬ್ಬ ಮಗುವೂ ವಚನಗಳನ್ನು ಓದುವ, ಹಾಡುವ, ಅರ್ಥೈಸುವ ಪ್ರಯತ್ನ ಮಾಡಬೇಕು. ಆಗ ಪ್ರತಿ ಮಗುವೂ ವಿಶ್ವಮಾನವನಾಗಲು ಸಾಧ್ಯ. ಭಕ್ತರ ಸಂತೋಷವೇ ನಮ್ಮ ಸಂತೋಷ. ಭಕ್ತರ ಮುಖದಲ್ಲಿ ಮಂದಹಾಸ ಮೂಡಿದರೆ, ಅದೇ ನಮಗೆ ಸಂತೋಷ. ಇಂಥ ಸಂತೋಷಕ್ಕಾಗಿ ನಾವು ಅನಾರೋಗ್ಯವನ್ನೂ ಲೆಕ್ಕಿಸುವುದಿಲ್ಲ ಎಂದರು.

ಸಾನ್ನಿಧ್ಯ ವಹಿಸಿದ್ದ ಚಿತ್ರದುರ್ಗದ ಯಾದವಾನಂದ ಸಂಸ್ಥಾನದ ಶ್ರೀ ಕೃಷ್ಣ ಯಾದವಾನಂದ ಮಹಾಸ್ವಾಮೀಜಿ ಮತ್ತು ಮಾಡಾಳ್‌ನ ನಿರಂಜನ ಪೀಠದ ಶ್ರೀ ರುದ್ರಮುನಿ ಮಹಾಸ್ವಾಮಿ ಸಾನ್ನಿಧ್ಯ ವಹಿಸಿ, ಮಾತನಾಡಿದರು.

'ಲಂಚ ವಂಚನಕ್ಕೆ ಕೈಯಾನದ ಭಾಷೆ' ಕುರಿತಂತೆ ಹಿರಿಯ ನ್ಯಾಯವಾದಿ ಎನ್ ಅನಂತನಾಯಕ್ ಮಾತನಾಡಿ, 'ಮತ್ತೆ ಕಲ್ಯಾಣ' ವೈಚಾರಿಕ ಸಂಘರ್ಷದ ಕಾರ್ಯಕ್ರಮ. ಎಲ್ಲ ತರತಮಗಳನ್ನು ನಿವಾರಿಸಿ ಮನುಷ್ಯನ ಘನತೆಯನ್ನು ಎತ್ತಿ ಹಿಡಿದು ವಿಶ್ವಕ್ಕೇ ಪರಿಚಯಿಸಿದ್ದು, ಅಂದಿನ ಬಸವಾದಿ ಶಿವಶರಣರ ಕಲ್ಯಾಣ. ಅದೇ ಆಶಯವನ್ನು ಇಂದು ಪಂಡಿತಾರಾಧ್ಯ ಸ್ವಾಮೀಜಿ ಮುಂದುವರೆಸಿದ್ದಾರೆ ಎಂದರು.

ಈಶ್ವರಪ್ಪ ಪ್ರಾರ್ಥನೆ ಮಾಡಿದರು. ಹೆಚ್. ಎಸ್. ಮಲ್ಲಿಕಾರ್ಜುನ್ ಸ್ವಾಗತಿಸಿದರು. ಹೆಚ್. ಎಸ್. ಕೊಟ್ರೂರಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಹೆಚ್. ಕೆ. ರಾಜಶೇಖರ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# ನಗರದಲ್ಲಿ ಇಂದು ಶಿಕ್ಷಕರ ದಿನಾಚರಣೆ ಹಾಗೂ ಗೌರವ ಸನ್ಮಾನ



ಹಿಮಾಲಯ ಅಡ್ವೆಂಚರ್ ಅಂಡ್ ನೇಚರ್ ಅಕಾಡೆಮಿ ವತಿಯಿಂದ ಶಿಕ್ಷಕರ ದಿನಾಚರಣೆ ಹಾಗೂ ಗೌರವ ಸನ್ಮಾನ ಕಾರ್ಯಕ್ರಮವನ್ನು ಜನತಾ ವಿದ್ಯಾಲಯ ಶಾಲೆಯಲ್ಲಿ ಆಯೋಜಿಸಿದ್ದು, ಗಣಿತ ಶಿಕ್ಷಕ ಎಚ್. ಎಸ್.ಉಮ್ಮೇಶ್ವರ ಅವರನ್ನು ಸನ್ಮಾನಿಸಲಿದ್ದು, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಹಿಮಾಲಯ ಅಡ್ವೆಂಚರ್ ಅಂಡ್ ನೇಚರ್ ಅಕಾಡೆಮಿ ಅಧ್ಯಕ್ಷ ಎಸ್.ರಾಜಶೇಖರಪ್ಪ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮಾಜಿ ಮೇಯರ್ ಎಸ್.ಟಿ ವೀರೇಶ್, ಹಿಮಾಲಯನ್ ಅಡ್ವೆಂಚರ್ ಅಂಡ್ ನೇಚರ್ ಅಕಾಡೆಮಿಯ ಪ್ರಧಾನ ಕಾರ್ಯದರ್ಶಿ ಎನ್. ಕೆ. ಕೊಟ್ರೇಶ್, ಭಾಗವಹಿಸಲಿದ್ದಾರೆ.

# ವಿಮಾನ ನಿಲ್ದಾಣ ಭದ್ರತೆ : 3 ಸಾವಿರ ಸಿಐಎಸ್‌ಎಫ್ ರದ್ದು

## ಖಾಸಗಿ ಭದ್ರತಾ ಸಿಬ್ಬಂದಿ ನೇಮಕ, ಸ್ಮಾರ್ಟ್ ಉಪಕರಣಗಳ ಬಳಕೆ



ನವದೆಹಲಿ, ಸೆ. 4 – ವಿಮಾನ ನಿಲ್ದಾಣಗಳ ಭದ್ರತಾ ವ್ಯವಸ್ಥೆಯಲ್ಲಿ ಪ್ರಮುಖ ಬದಲಾವಣೆ ತರುವ ಯೋಜನೆಯ ಅಂಗವಾಗಿ 3 ಸಾವಿರಕ್ಕೂ ಹೆಚ್ಚು ಸಿ.ಐ.ಎಸ್.ಎಫ್. ಹುದ್ದೆಗಳನ್ನು ರದ್ದುಗೊಳಿಸಿರುವ ಕೇಂದ್ರ ಸರ್ಕಾರ, ಖಾಸಗಿ ಭದ್ರತಾ ಸಿಬ್ಬಂದಿಯನ್ನು ನೇಮಿಸಿದೆ. 2018-19ರಲ್ಲಿ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ, ನಾಗರಿಕ ವೈಮಾನಿಕ ಭದ್ರತಾ ದಳ ಹಾಗೂ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿ.ಐ.ಎಸ್.ಎಫ್.) ಗಳು ಈ ಯೋಜನೆ ರೂಪಿಸಿದ್ದವು. ಅದರ ಅನ್ವಯ, 3,049 ಸಿ.ಐ.ಎಸ್.ಎಫ್. ಭದ್ರತಾ ಹುದ್ದೆಗಳನ್ನು ರದ್ದುಗೊಳಿಸಲಾಗಿದೆ. ಇವರ ಜಾಗಕ್ಕೆ 1,924 ಖಾಸಗಿ ಭದ್ರತಾ ಸಿಬ್ಬಂದಿಯನ್ನು ನೇಮಿಸಲಾಗುವುದು.

ಇದೇ ವೇಳೆ ಸ್ಮಾರ್ಟ್ ತಂತ್ರಜ್ಞಾನ ಆಧರಿತ ಉಪಕರಣಗಳನ್ನು ಬಳಕೆ ಮಾಡಲಾಗುವುದು.

# ಪತ್ರಕರ್ತರ ಆರೋಗ್ಯ ಕ್ಷೇಮಕ್ಕೆ ಸಂಘದ ನಿರಂತರ ಶ್ರಮ




ದಾವಣಗೆರೆ, ಸೆ. 4 - ಪತ್ರಕರ್ತರ ಆರೋಗ್ಯದ ಬಗ್ಗೆ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘವು ಆಪದ್ಬಾಂಧವ, ಕ್ಷೇಮಾಭಿವೃದ್ಧಿ ನಿಧಿ ಯೋಜನೆಗಳಿಂದ ಹಿಡಿದು ಸರ್ಕಾರದಿಂದ ನೆರವುಗಳನ್ನು ಕೊಡಿಸುವವರೆಗೆ ನಿರಂತರವಾಗಿ ಶ್ರಮಿಸುತ್ತಿದೆ ಎಂದು ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಹೇಳಿದರು.

ಜಿಲ್ಲಾ ವರದಿಗಾರರ ಕೂಟ ಹಾಗೂ ಕಾರ್ಯನಿರತ ಪತ್ರಕರ್ತರ ಸಂಘಗಳ ಸಂಯುಕ್ತಾಶ್ರಯದಲ್ಲಿ ವರದಿಗಾರರ ಕೂಟದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಸ್ಯೆಗೆ ಸಿಲುಕುವ ಪತ್ರಕರ್ತರಿಗೆ ನೆರವಾಗಲು 'ಆಪದ್ಬಾಂಧವ' ವಾಟ್ಸ್‌ಆಪ್ ಗ್ರೂಪ್ ರಚಿಸಲಾಗಿದೆ. ಗ್ರೂಪ್‌ನಲ್ಲಿರುವ ಸದಸ್ಯರಿಂದ ಹಣ ಸಂಗ್ರಹಿಸಿ ಸಂತ್ರಸ್ತರಿಗೆ ನೆರವು ನೀಡಲಾಗುತ್ತಿದೆ ಎಂದವರು ತಿಳಿಸಿದರು.

**ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು**

ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಲಾಗಿದ್ದು, ಪ್ರಸಕ್ತ 37 ಲಕ್ಷ ರೂ. ಸಂಗ್ರಹವಾಗಿದೆ. ಇದರ ಬಡ್ಡಿ ಮೂಲಕ ಪತ್ರಕರ್ತರಿಗೆ ನೆರವು ನೀಡಲಾಗುತ್ತಿದೆ. ಈ ಮೊತ್ತವನ್ನು 1 ಕೋಟಿ ರೂ.ಗಳಿಗೆ ಹೆಚ್ಚಿಸುವ ಗುರಿ ಇದೆ. ಇದೇ ರೀತಿಯ ನಿಧಿಗಳನ್ನು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲೂ ಸ್ಥಾಪಿಸಲಾಗುತ್ತಿದೆ. ಪತ್ರಕರ್ತರ ಸಂಘಗಳು ಸ್ಥಳೀಯವಾಗಿಯೇ ಸ್ವಾವಲಂಬಿ ಆಗಬೇಕು ಎಂಬುದು ತಮ್ಮ ಉದ್ದೇಶ ಎಂದರು.

ಕೊರೊನಾ ಅವಧಿಯಲ್ಲಿ 107 ಪತ್ರಕರ್ತರು ಸೋಂಕಿನಿಂದಾಗಿ ಸಾವಿಗೀಡಾಗಿದ್ದಾರೆ. ಇವರ ಪೈಕಿ 55-60 ಜನರಿಗೆ ಸರ್ಕಾರದಿಂದ ತಲಾ 5 ಲಕ್ಷ ರೂ.ಗಳ ಪರಿಹಾರ ಕೊಡಿಸಲಾಗಿದೆ. ಕೆಲವು ಪತ್ರಕರ್ತರ ಕುಟುಂಬದವರ ಆರ್ಥಿಕ ಸ್ಥಿತಿ ಉತ್ತಮವಾಗಿದ್ದರಿಂದ ಅವರು ಪರಿಹಾರ ಬೇಡ ಎಂದು ತಾವೇ ತಿಳಿಸಿದ್ದಾರೆ ಎಂದರು.

ರಾಜ್ಯ ಸರ್ಕಾರದಿಂದ ಪ್ರಸಕ್ತ ಅಕ್ರಿಡಿಷನ್ ಹೊಂದಿರುವ ಪತ್ರಕರ್ತರಿಗೆ ಮಾತ್ರ ಆರೋಗ್ಯ ವಿಮೆ ದೊರೆಯುತ್ತಿದ್ದು, ಇದನ್ನು ಎಲ್ಲ ಪತ್ರಕರ್ತರ ಕುಟುಂಬಗಳಿಗೆ ವಿಸ್ತರಿಸಲು ಶ್ರಮಿಸಲಾಗುತ್ತಿದೆ ಎಂದು ತಗಡೂರು ಹೇಳಿದರು.

ಎಲ್ಲ ಜಿಲ್ಲೆಗಳು ಹಾಗೂ ತಾಲ್ಲೂಕುಗಳಲ್ಲೂ ಪತ್ರಕರ್ತರ ಭವನ ಇರಬೇಕು ಎಂಬುದು ತಮ್ಮ ಗುರಿಯಾಗಿದೆ. ಅದರಂತೆ ದಾವಣಗೆರೆಯಲ್ಲೂ ಭವನ ನಿರ್ಮಾಣಕ್ಕೆ ಶ್ರಮಿಸಲಾಗುವುದು ಎಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್, ಸಂಘವು 91 ವರ್ಷಗಳ ಇತಿಹಾಸ ಹೊಂದಿದೆ. ಈಗ 8 ಸಾವಿರಕ್ಕೂ ಹೆಚ್ಚು ಸದಸ್ಯರಿದ್ದು, ಸರ್ಕಾರದಿಂದ ಮಾನ್ಯತೆ ಪಡೆದಿರುವ ಏಕೈಕ ಸಂಘ ಇದಾಗಿದೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಕೆ. ಚಂದ್ರಪ್ಪ, ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಫಕೃದ್ದೀನ್, ವರದಿಗಾರರ ಕೂಟದ ಸಾರ್ವಜನಿಕ ಸಂಪರ್ಕಾಧಿಕಾರಿ ರಂಗನಾಥ ರಾವ್ ಮತ್ತಿತರರು ಉಪಸ್ಥಿತರಿದ್ದರು.


ssims SPARSH CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಕೀಲು ಮರುಜೋಡಣೆ
- ಮೊಣಕಾಲು ನೋವು
- ಹಿಪ್ ಮರುಜೋಡಣೆ
- ಭುಜದ ನೋವು
- ರಿವಿಷನ್ ಶಸ್ತ್ರಚಿಕಿತ್ಸೆ
- ಸ್ಪೋರ್ಟ್ಸ್ ಇಂಜುರೀಸ್
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 8ನೇ ಸೆಪ್ಟೆಂಬರ್ 2022 ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 5ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್,
ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ
ನೋಂದಣಿಗಾಗಿ ಕರೆಮಾಡಿ: 96869 29090
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


# ನಾಳೆ ಉದ್ಯೋಗ ಸಂದರ್ಶನ

ದಾವಣಗೆರೆ, ಸೆ.4- ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ನಾಡಿದ್ದು ದಿನಾಂಕ 6 ರ ಮಂಗಳ ವಾರ ಬೆಳಗ್ಗೆ 10 ಗಂಟೆಗೆ ಜಿಲ್ಲಾಡಳಿತ ಭವನದ ಕೊಠಡಿ ಸಂಖ್ಯೆ-51 ರಲ್ಲಿ ಸಂದರ್ಶನ ಏರ್ಪಡಿಸಲಾಗಿದೆ.ಈ ಸಂದರ್ಶನದಲ್ಲಿ ಆರ್.ಯು ಲೋನ್ಸ್ ಡಿಸ್ಟ್ರಿಬ್ಯೂಷನ್ ಸರ್ವಿಸಸ್ ಪ್ರೈ ಲಿಮಿಟೆಡ್ ಕಂಪನಿ ಭಾಗವಹಿಸುತ್ತಿದ್ದು, ಪಿಯುಸಿ, ಐಟಿಐ, ಡಿಪ್ಲೋಮ, ಪದವಿ ಹಾಗೂ ಸ್ನಾತಕೋತ್ತರ ಪದವಿ ವ್ಯಾಸಂಗ ಪೂರೈಸಿದ ಅಭ್ಯರ್ಥಿಗಳನ್ನು ತಮ್ಮ ಸಂಸ್ಥೆಯಲ್ಲಿನ ಖಾಲಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲಿದೆ. ಆಸಕ್ತ ಅಭ್ಯರ್ಥಿಗಳು ಕನಿಷ್ಠ 3 ಬಯೋಡಾಟಾ, ಆಧಾರ್ ಕಾರ್ಡ್ ನೊಂದಿಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಕೊಠಡಿ ಸಂಖ್ಯೆ-51, ಜಿಲ್ಲಾಡಳಿತ ಭವನ, ದಾವಣಗೆರೆ ಇಲ್ಲಿ ಭಾಗವಹಿಸ ಬಹುದು. ಹೆಚ್ಚಿನ ಮಾಹಿತಿಗೆ 08192-259446, 63615 50016, 7406323294 ಸಂಪರ್ಕಿಸಬಹುದೆಂದು ಜಿಲ್ಲಾ ಉದ್ಯೋಗಾಧಿಕಾರಿ ಗಿರೀಶ್ ತಿಳಿಸಿದ್ದಾರೆ.

# ನಗರಕ್ಕೆ ಇಂದು ಉಮಾಶಂಕರ್

ದಾವಣಗೆರೆ, ಸೆ.3- ಸಹಕಾರ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಅವರು ನಾಡಿದ್ದು ದಿನಾಂಕ 5 ರ ಸೋಮವಾರ ನಗರಕ್ಕೆ ಆಗಮಿಸಲಿದ್ದಾರೆ. ಅಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಅವರು, ಜಿಲ್ಲಾ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನೆ ನಡೆಸುವರು. ನಂತರ ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆ ಅಭಿವೃದ್ಧಿ ಪರಿಶೀಲಿಸುವರು. ಸಂಜೆ 6 ಗಂಟೆಗೆ ಬೆಂಗಳೂರಿಗೆ ತೆರಳುವರು.

# ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷರಾಗಿ ಮಲ್ಲೇಶಪ್ಪ








**(1ನೇ ಪುಟದಿಂದ)** ಎಂ.ಆರ್. ಸತೀಶ್, ಸಹ ಕಾರ್ಯದರ್ಶಿಯಾಗಿ ಎಂ.ಎನ್. ವೀರೇಂದ್ರ ಪಾಟೀಲ್, ಖಜಾಂಚಿಯಾಗಿ ಮೊಹಮ್ಮದ್ ಅಸ್ಲಾಂ ಆಯ್ಕೆಯಾಗಿದ್ದಾರೆ. ಎಂ.ಎನ್. ಹರೀಶ್, ಖಂಡೋಜಿರಾವ್, ಜಿ.ಎಸ್. ರಾಜು, ಅಬೂಬಕರ್ ಸಿದ್ದಿಗಿ, ಜಿ.ಎಸ್.ಸುದೀಪ್,ಎಸ್.ಎನ್.ಕೊಟ್ರೇಶಪ್ಪ,ಜಿ.ಎ.ಪೀರ್‌ಪಾಶ,ಬಿ.ಎಸ್.ವೀರೇಶ್,ಐ.ಸಲಾಂನಿರ್ದೇಶಕರುಗಳಾಗಿದ್ದಾರೆ.

# ಸಿಂಗ್ರಿಹಳ್ಳಿ ದಾದಾಪೀರ್ ಸಾಬ್ ನಿಧನ



ದಾವಣಗೆರೆ ಚಾಮರಾಜಪೇಟೆ ವಾಸಿ ದಿ|| ಗುಲಾಂ ರಸೂಲ್ ಸಾಬ್ ಬಾವಿಕಟ್ಟೆ
ಇವರ ಹಿರಿಯ ಮಗನಾದ ದಾದಾ ಹಯಾತ್ ಪೋಹಾ ಇಂಡಸ್ಟ್ರಿಯ ಮಾಲೀಕರೂ
ಮತ್ತು ಸಿಂಗ್ರಿಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರೂ ಆಗಿದ್ದ
**ಸಿಂಗ್ರಿಹಳ್ಳಿ ದಾದಾಪೀರ್ ಸಾಬ್** ಅವರು
ದಿನಾಂಕ 04-05-2022ರ ಭಾನುವಾರ ರಾತ್ರಿ ತಮ್ಮ ಸ್ವಗೃಹದಲ್ಲಿ ನಿಧನರಾದರು.
ಮೃತರಿಗೆ ಸುಮಾರು 65 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಐವರು ಪುತ್ರಿಯರು
ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ದಫನ್ ಕಾರ್ಯವನ್ನು
ದಿನಾಂಕ 05.09.2022ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಜೋಹರ್ ನಮಾಜ್ ನಂತರ
ನಗರದ ಪಿ.ಬಿ. ರಸ್ತೆಯಲ್ಲಿರುವ ಖಬರಸ್ತಾನದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಮೊ. : 99160 16483, 98455 24474





ಬಾಬು ಜಗಜೀವನ್‌ನಗರ (ಜಾಲಗಾರ್ ಓಣಿ) ಹಾಗೂ ಎಸ್.ಪಿ.ಎಸ್. ನಗರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ/ ಉದ್ಘಾಟನಾ ಸಮಾರಂಭ

| ಕಾಮಗಾರಿಗಳ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ ) | ಸ್ಥಳ |
|---|---|---|
| ಶಾಸಕರ ಅನುದಾನದಲ್ಲಿ ವಾರ್ಡ್ ನಂ.5 ಬಾಬು ಜಗಜೀವನ್‌ರಾಂ ನಗರದ (ಜಾಲಗಾರ ಓಣಿ) ರಾಜೀವ್ ಗಾಂಧಿ ಬಡಾವಣೆ ಮುಖ್ಯ ರಸ್ತೆಯಲ್ಲಿ ಬರುವ ಎಡ ಮತ್ತು ಬಲ ಭಾಗದ 04 ವಿವಿಧ ಅಡ್ಡ ರಸ್ತೆಗಳಿಗೆ ಸಿ.ಸಿ. ರಸ್ತೆ ನಿರ್ಮಾಣದ ಕಾಮಗಾರಿ. | 16.80 | ಶ್ರೀ ಗೌರಚಂದ್ರ ಮಾರಮ್ಮ ದೇವಸ್ಥಾನದ ಹತ್ತಿರ ಸಮಯ :12–30ಕ್ಕೆ |
| ಶಾಸಕರ ಅನುದಾನದಲ್ಲಿ ವಾರ್ಡ್ ನಂ.5 ಬಾಬು ಜಗಜೀವನ್‌ರಾಂ ನಗರದ (ಜಾಲಗಾರ ಓಣಿ) ರಾಜೀವ್ ಗಾಂಧಿ ಬಡಾವಣೆ ಮುಖ್ಯ ರಸ್ತೆಯಲ್ಲಿ ಬರುವ ಎಡ ಮತ್ತು ಬಲ ಭಾಗದ ಉಳಿದ 02 ಅಡ್ಡ ರಸ್ತೆಗಳಿಗೆ ಸಿ.ಸಿ. ರಸ್ತೆ ನಿರ್ಮಾಣದ ಕಾಮಗಾರಿ. | 7.17 | |
| ಮಹಾನಗರ ಪಾಲಿಕೆಯ ಅನುದಾನದಲ್ಲಿ ವಾರ್ಡ್ ನಂ.5 ಬಾಬು ಜಗಜೀವನ್‌ರಾಂ ನಗರದ (ಜಾಲಗಾರ ಓಣಿ) 1 ರಿಂದ 5ನೇ ಕ್ರಾಸ್‌ಗಳಲ್ಲಿ ಒಳಚರಂಡಿ ಕಾಮಗಾರಿ. | 16.15 | |
| ಲೋಕೋಪಯೋಗಿ ಇಲಾಖೆ ವತಿಯಿಂದ ವಾರ್ಡ್ ನಂ.5 ಜಾಲಗಾರ ಓಣಿಯಲ್ಲಿರುವ ಎರಡು ಅಡ್ಡರಸ್ತೆಗಳಿಗೆ ಸಿ.ಸಿ.ರಸ್ತೆ ನಿರ್ಮಾಣದ ಕಾಮಗಾರಿ | 10.00 | |
| 15ನೇ ಹಣಕಾಸು ಯೋಜನೆಯಡಿ ವಾರ್ಡ್ ನಂ.5 ಎಸ್.ಪಿ.ಎಸ್.ನಗರದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ | 9.00 | ಎಸ್.ಪಿ.ಎಸ್.ನಗರದ 1ನೇ ಹಂತ ಗಣೇಶ ದೇವಸ್ಥಾನದ ಹತ್ತಿರ ಸಮಯ :12–45ಕ್ಕೆ |
| ಅಲ್ಪಸಂಖ್ಯಾತರ ಅನುದಾನದಡಿ ವಾರ್ಡ್ ನಂ.5 ಎಸ್.ಪಿ.ಎಸ್. ನಗರ 2ನೇ ಹಂತದಲ್ಲಿ ಒಂದು ಹೈಮಸ್ಟ್ ಲೈಟ್ ಮತ್ತು 10 ಸೋಲಾರ್ ಬೀದಿ ದೀಪ ಅಳವಡಿಸಿರುವ ಕಾಮಗಾರಿ. | 12.00 | ಎಸ್.ಪಿ.ಎಸ್.ನಗರದ 2ನೇ ಹಂತ ಆಂಜನೇಯ ದೇವಸ್ಥಾನದ ಹತ್ತಿರ ಸಮಯ :1–00ಕ್ಕೆ |
| ಒಟ್ಟು | 71.12 | |

ಈ ಕಾಮಗಾರಿಗಳ ಭೂಮಿ ಪೂಜೆ ಹಾಗೂ ಉದ್ಘಾಟನಾ ಸಮಾರಂಭಕ್ಕೆ ಆಗಮಿಸುತ್ತಿರುವ ಸನ್ಮಾನ್ಯ ಡಾ|| ಶಾಮನೂರು ಶಿವಶಂಕರಪ್ಪ ಅವರಿಗೂ, ಮಹಾನಗರ ಪಾಲಿಕೆಯ ಎಲ್ಲಾ ಕಾಂಗ್ರೆಸ್ ಸದಸ್ಯರುಗಳಿಗೂ, ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರುಗಳಿಗೂ ಹಾಗೂ ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ ಹೃದಯಪೂರ್ವಕ ಸ್ವಾಗತ ಸುಸ್ವಾಗತ

5 ನೇ ವಾರ್ಡ್‌ನ ಸಮಸ್ತ ನಾಗರೀಕರು


ಸುಧಾ ಮಂಜುನಾಥ್ ಇಟ್ಟಿಗುಡಿ
ಸದಸ್ಯರು, 5ನೇ ವಾರ್ಡ್, ಮಹಾನಗರ ಪಾಲಿಕೆ.


ಇಟ್ಟಿಗುಡಿ ಮಂಜುನಾಥ್
ಕಾಂಗ್ರೆಸ್ ಮುಖಂಡರು


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte